ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಮುಖ ಪತ್ರಿಕೆ

ಸಂಪುಟ 2 | ಸಂಚಿಕೆ 48 | ನವೆಂಬರ್ 30, 1980 | ಬೆಲೆ : 50 ಪೈಸೆ

ಚುನಾವಣಾ ಫಲಿತಾಂಶ

ನವೆಂಬರ್ 23ರಂದು ಬೇರೆಬೇರೆ ರಾಜ್ಯಗಳಲ್ಲಿ ಒಟ್ಟು 15 ವಿಧಾನಸಭಾ ಕ್ಷೇತ್ರಗಳಲ್ಲಿ ಚುನಾವಣೆ ನಡೆಯಿತು. ಇವುಗಳಲ್ಲಿ 10 ಸ್ಥಾನಗಳನ್ನು ಕಾಂಗ್ರೆಸ್ ಗಿಟ್ಟಿಸಿಕೊಂಡಿದೆ. ಕರ್ನಾಟಕ ರಾಜ್ಯದಲ್ಲಿ ಬಸವನ ಗುಡಿ ಕ್ಷೇತ್ರ ಮತ್ತು ಹೊಳಲ್ಕೆರೆ ಕ್ಷೇತ್ರಗಳಲ್ಲಿ ಚುನಾವಣೆ ನಡೆದಿತ್ತು. ಬಸವನಗುಡಿ ಕ್ಷೇತ್ರದಲ್ಲಿ ಕಾಂಗ್ರೆಸ್ಸು ಅಭ್ಯರ್ಥಿಯನ್ನು ಸುಮಾರು 700 ಮತಗಳ ಅಂತರದಿಂದ ಸೋಲಿಸಿ ಜನತಾಪಕ್ಷದ ಅಭ್ಯರ್ಥಿ ವಿಜಯಿ ಆಗಿದ್ದಾರೆ. ಹೊಳಲ್ಕೆರೆಯಿಂದ ಕಾಂಗ್ರೆಸ್ ಅಭ್ಯರ್ಥಿ ಹೆಚ್ಚಿನ ಬಹುಮತದಿಂದ ಗೆಲ್ಲುವುದು ಸಾಧ್ಯವಾಗಿದೆ. ಬಸವನಗುಡಿ ಕ್ಷೇತ್ರದಲ್ಲಿ ಸರ್ವಾಧಿಕಾರಿ ಕಾಂಗ್ರೆಸ್ ಮತ್ತು ಕೋಮುವಾದಿ ಪಕ್ಷದ ಅಭ್ಯರ್ಥಿಗಳನ್ನು ಸೋಲಿಸಿ, ಜನತಾ ಪಕ್ಷದ ಅಭ್ಯರ್ಥಿ ಗದ್ದಿರುವುದು ಪ್ರಜಾಪ್ರಭುತ್ವ ಶಕ್ತಿಗಳಿಗೆ ಸಂತಸದ ವಿಚಾರ.

ರಾಜ್ಯದ ಉಪಚುನಾವಣೆಯು ಇಲ್ಲಿಯ ವಿರೋಧ ಪಕ್ಷಗಳಲ್ಲಿರುವ ಅನೈಕ್ಯತೆಯನ್ನು ಎತ್ತಿತೋರಿಸಿದೆ. ಮುಖ್ಯಪಟ್ಟ ವಿರೋಧ ಪಕ್ಷಗಳು ಅನುಭವದಿಂದ ಪಾಠ ಕಲಿತಿಲ್ಲವೆಂಬುದೂ ಸ್ಪಷ್ಟವಾಗಿದೆ. ವಿರೋಧ ಪಕ್ಷಗಳು ಒಂದಾಗಿ ಹೋರಾಡಿದ್ದರೆ ಹೊಳಲ್ಕೆರೆ ಕ್ಷೇತ್ರದಲ್ಲೂ ಕಾಂಗ್ರೆಸ್‌ಗೆ

ಸಂಪಾದಕೀಯ

ಪ್ರಬಲ ಸವಾಲು ನೀಡುವುದು ಮಾತ್ರವೇ ಅಲ್ಲ, ಅದರ ಅಭ್ಯರ್ಥಿಯನ್ನು ಸೋಲಿಸುವುದೂ ಸಾಧ್ಯವಿತ್ತು. ಏಕೆಂದರೆ ವಿರೋಧ ಪಕ್ಷಗಳು ಒಂದಾಗಿ ಪ್ರಚಾರಕ್ಕಿಳಿದಿದ್ದರೆ, ಪ್ರಚಾರದ ರೂಪವೇ ಬೇರೆ ಆಗಬಹುದಿತ್ತು. ಅಲ್ಲಿ ಬಿದ್ದಿರುವ ಒಟ್ಟು ಕಾಂಗ್ರೆಸ್ ವಿರೋಧ ಮತಗಳ ಸಂಖ್ಯೆಯಿಂದ ಮೇಲಿನ ವಾದಕ್ಕೆ ಪುಷ್ಟಿದೊರೆಯುತ್ತದೆ.

ಇನ್ನು ಮೇಲಾದರೂ ವಿರೋಧ ಪಕ್ಷಗಳು ಅನೈಕ್ಯತೆಯಿಂದಿರಬಾರದು. ಸರ್ವಾಧಿಕಾರವನ್ನು ಮತ್ತು ಕೋಮುವಾದವನ್ನು ವಿರೋಧಿಸುವ, ಬೆಲೆಏರಿಕೆಯಂತಹ ಜನತೆಯನ್ನು ಬಾಧಿಸುವ ಸಮಸ್ಯೆಗಳ ವಿರುದ್ಧ ಪ್ರಗತಿಶೀಲ ದೃಷ್ಟಿ ಇಟ್ಟು ಹೋರಾಡಲು ಇಚ್ಛಿಸುವ ಜಾತ್ಯಾತೀತ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಹೋರಾಡದಿದ್ದರೆ ರಾಜ್ಯಕ್ಕೆ ಬದಲೀ ದಾರಿ ಇಲ್ಲ. ನವದೆಹಲಿಯಲ್ಲಿ ಸೇರಿದ್ದ ಆರು ಪಕ್ಷಗಳ ಸಮಾವೇಶದ ಕರೆಯಂತೆ ಇಲ್ಲೂ ಜಂಟೀ ಹೋರಾಟ ಬೆಳೆಯಬೇಕು. ಮಹಾರಾಷ್ಟ್ರ, ಆಂಧ್ರಗಳಲ್ಲಿನಂತೆ ಜನತಾಪಕ್ಷವೂ ಇದರಲ್ಲಿ ಭಾಗವಹಿಸಲು ಒತ್ತಾಯಿಸಬೇಕು. ಇವೆಲ್ಲಾ ಕಾರ್ಯರೂಪಕ್ಕೆ ಬರಲು ಸಾಧ್ಯವಾಗುವಂತಾಗಲು ರಾಜ್ಯದಲ್ಲಿನ ಎಡಪಕ್ಷಗಳ ಐಕ್ಯತೆಯೂ ಬಲಗೊಳ್ಳಬೇಕು.

ಚಿನ್ನ ಕೊಡುವವರಿಗೆ ಅನ್ನಕ್ಕೂ ಗತಿಯಿಲ್ಲ

ಹದಿನಾಲ್ಕು ಸಹಸ್ರ ಕಾರ್ಮಿಕರ ಮುಷ್ಕರ

ಕರ್ನಾಟಕ ರಾಜ್ಯದ ಕೋಲಾರ ಜಿಲ್ಲೆಯ ಕೆ. ಜಿ. ಎಫ್. ನಲ್ಲಿರುವ ಚಿನ್ನದ ಗಣಿಗಳಿಗೆ ನೂರುವರ್ಷ ತುಂಬುವುದರಲ್ಲಿದೆ. ತಲೆತಲೆಮಾರಿನಿಂದ ಜೀವನ ಪರ್ಯಂತ ಗಣಿಗಳಲ್ಲಿ ದುಡಿದು ಸಾವನ್ನಪ್ಪಿದ ಕಾರ್ಮಿಕರ ಸಂಖ್ಯೆಗೆ ಲೆಕ್ಕವಿಲ್ಲ. ಅತ್ಯಂತ ಕಷ್ಟದಿಂದ ಗಣಿಗಳಲ್ಲಿ ದುಡಿಯುವ ಹದಿನಾಲ್ಕು ಸಹಸ್ರ ಮಂದಿ ಕಾರ್ಮಿಕರಿಗೆ ಮಾನವರಂತೆ ಜೀವಿಸಲು ಬೇಕಾದಷ್ಟು ವೇತನ ಮತ್ತು ಸವಲತ್ತುಗಳನ್ನು ಕೊಡಬೇಕೆಂಬುದು ಸಮಾಜವಾದದ ಬಗ್ಗೆ ಹೇಳುವ ಕಾಂಗ್ರೆಸ್ ಸರಕಾರದ ಗಮನಕ್ಕೆ ಬಂದೇ ಇಲ್ಲ. ತಮ್ಮ ಸಮಸ್ಯೆಗಳ ಪರಿಹಾರವಾಗಬೇಕಾದರೆ ಸಿ ಐ ಟಿ ಯು. ವಿನ ನೇತೃತ್ವದಲ್ಲಿ ಒಂದಾಗಿ ಹೋರಾಡಬೇಕೆಂದು ಅಲ್ಲಿಯ ಕಾರ್ಮಿಕವರ್ಗ ತೀರ್ಮಾನಿಸಿದೆ. ಯೂನಿಯನ್ನಿನ ಮನ್ನಣೆಯ ಬಗ್ಗೆ ನಡೆದಿರುವ ಚುನಾವಣೆಯಲ್ಲಿ ಅತ್ಯಂತ ಅಧಿಕ ಬಹುಮತದಿಂದ ಸಿ. ಐ ಟಿ. ಯು. ಯೂನಿಯನ್ನಿಗೆ ಬೆಂಬಲವೂ ದೊರಕಿದೆ.

ಹಿಂದೆಂದೂ ಇಲ್ಲದ ಐಕ್ಯತೆಯನ್ನು ಕೆ ಜಿ. ಎಫ್ ನ ಕಾರ್ಮಿಕವರ್ಗ ತೋರಿಸುತ್ತಿದೆ. ಶತಾಬ್ದಿ ಕಾರ್ಯಕ್ರಮವನ್ನು ಆಚರಿಸುವ ಸಂದರ್ಭದಲ್ಲಿ ಕಾರ್ಮಿಕರಿಗೆ ಒಂದು ತಿಂಗಳ ಸಂಬಳವನ್ನು ಕೊಡಬೇಕು; ಕಾರ್ಮಿಕರಿಗೆ ಶೇ. 20 ರಷ್ಟು ಬೋನಸ್ಸು ಸಿಗಬೇಕು; ಖಾಯಿಲೆ ಮತ್ತು ದುರ್ಘಟನೆಗೆ ಒಳಗಾದ ಕಾರ್ಮಿಕರಿಗೆ ಸವಲತ್ತು ಕೊಡುವಾಗ ಹಳೆ ಮತ್ತು ಹೊಸ ಕಾರ್ಮಿಕರೆಂಬ ಭೇದವನ್ನು ತರಬಾರದು-ಬದಲು ಪ್ರಯೋಜನ ಎಲ್ಲರಿಗೂ ದೊರೆಯಬೇಕು -ಇತ್ಯಾದಿ ಬೇಡಿಕೆಗಳನ್ನು ಮುಂದಿಟ್ಟು ಚಿನ್ನದಗಣಿಯ ಹದಿನಾಲ್ಕು ಸಹಸ್ರ ಮಂದಿ ಕಾರ್ಮಿಕರು ತಾ-26-11-80 ರಂದು ಒಂದು ದಿವಸ ಯಶಸ್ವಿ ಮುಷ್ಕರವನ್ನು ನಡೆಸಿರುವರು. ಮುಷ್ಕರಕ್ಕೆ ಮೊದಲು 24 ರ ಸಂಜೆ ನಡೆದ ಭಾರಿ ಬಹಿರಂಗ ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ. ಸೂರ್ಯನಾರಾಯಣ ರಾವ್ ಅವರು ಬೇಡಿಕೆಗಳು ಈಡೇರದಿದ್ದಲ್ಲಿ ಅನಿರ್ದಿಷ್ಟ ಕಾಲದ ಮುಷ್ಕರವನ್ನು ನಡೆಸಲು ಹಿಂಜರಿಯುವುದಿಲ್ಲವೆಂದು ಸರಕಾರವನ್ನು ಎಚ್ಚರಿಸಿರುವರು. ನವದೆಹಲಿಯಲ್ಲಿ ನಡೆದ ಮಾತುಕತೆಯ ವಿವರಣೆಯನ್ನು ಕಾಂ. ಸೂರ್ಯನಾರಾಯಣ ರಾವ್ ಸಭೆಯ ಮುಂದಿಟ್ಟರು. ಕೋಲಾರದ ರೈತ ಮುಖಂಡ ಕಾಂ. ಆರ್. ವಿ. ವೆಂಕಟರಾಮಯ್ಯ, ವೆಂಕಟಗಿರಿಯಪ್ಪ ಮೊದಲಾದವರೂ ಮಾತನಾಡಿ ಹೋರಾಟಕ್ಕೆ ಬೆಂಬಲ ಸಾರಿದ್ದರು.

○

ತೀವ್ರವಾಗುತ್ತಿರುವ ಕೋಲಾರ ರೈತ ಚಳುವಳಿ

೨೨ ಬೇಡಿಕೆಗಳನ್ನು ಮುಂದಿಟ್ಟು ಕಳೆದ ತಿಂಗಳು ೨೭ರಂದು ಜಿಲ್ಲೆಯಾದ್ಯಂತ ಪ್ರಾರಂಭವಾದ ರೈತಚಳುವಳಿ ದ್ವಿತೀಯ ಹಂತವನ್ನು ಪ್ರವೇಶಿಸಿದೆ. ಮುಳಬಾಗಿಲು, ಚಿಂತಾಮಣಿ, ಶಿಡ್ಲಘಟ್ಟ, ಚಿಕ್ಕಬಳ್ಳಾಪುರ ಮತ್ತಿತರ ತಾಲ್ಲೂಕುಗಳಲ್ಲಿ ಪಿಕೆಟಿಂಗ್ ಮೊದಲಾದ ಕಾರ್ಯಕ್ರಮಗಳು ನಡೆದು ನೂರಾರು ಜನ ಬಂಧನಕ್ಕೊಳಗಾಗಿದ್ದರು. ಈ ತಿಂಗಳು ೧೦ ರಿಂದ ಚಳುವಳಿ ತೀವ್ರ ಸ್ವರೂಪವನ್ನು ತಾಳಿದೆ.

ರಾಜ್ಯದ ವಿವಿಡೆಡೆ ಬೃಹತ್ ಸ್ವರೂಪ ತಳೆದಿದ್ದ ರೈತ ಚಳುವಳಿ ಪರಿಣಾಮವಾಗಿ ಮುಖ್ಯಮಂತ್ರಿ ಕೆಲವೊಂದು ರಿಯಾಯಿತಿಗಳನ್ನು ನೀಡಿದ್ದರೂ ಪ್ರಾಯೋಗಿಕವಾಗಿ ಯಾವ ಫಲವೂ ದೊರೆತಿಲ್ಲ. ಕೋಲಾರದ ಮಟ್ಟಿಗೆ ಹೇಳುವುದಾದರೆ ಜಿಲ್ಲೆಗೆ ಪರಿಹಾರ ರೂಪವಾಗಿ ದೊರೆತ 35ಲಕ್ಷ ರೂ ಏನೇನೂ ಸಾಲದು. ಹಸಿವಿನ ದವಡೆಗೆ ಸಿಲುಕಿರುವ ರೈತನಿಗೆ ಸರ್ಕಾರದ ಆಶ್ವಾಸನೆಗಳು ಮೃಗಜಲದಂತಾಗಿವೆ. ಸಣ್ಣ ರೈತರಿಗೆ ಸಾಲ ರಿಯಾಯಿತಿ ಮಾಡುವುದಾಗಿ ಹೇಳಲಾಗಿದೆ. ಈ ರಿಯಾಯಿತಿಗೆ ಅರ್ಹನಾಗಲು ರೈತ ಕೆಲವೊಂದು ಷರತ್ತುಗಳನ್ನು ಪಾಲಿಸಬೇಕು, ಆ ಷರತ್‌ಗಳೇನೆಂದರೆ 1. ರೈತ ತನ್ನ ಜಮೀನಿನಲ್ಲಿ ಹಿಂದಿನ 3 ವರ್ಷ ಬೆಳೆ ಇಟ್ಟಿರಬಾರದು 2 ಹಣ ಮಾಸಸ್ಸು ಮಾಡಲು ಪೂರ್ತಿ ಅಶಕ್ತನಾಗಿರಬೇಕು 3. ಬೆಳೆ ಇಡದಬಗ್ಗೆ ಪಹಣಿಪತ್ರ ಒದಗಿಸಬೇಕು 4 ತನ್ನ ವಾರ್ಷಿಕ ವರಮಾನದ ತಹಶೀಲ್ದಾರರಿಂದ ಧೃಡೀಕರಣಪತ್ರ ತರಬೇಕು. ಇತ್ಯಾದಿಗಳು. ಈ ಷರತ್ತುಗಳನ್ನು ಪೂರೈಸಲು ಸಾಧ್ಯವಾಗದೇ ರೈತ ಪರದಾಡಬೇಕಾಗಿದೆ. ಜಿಲ್ಲೆ ಪೂರ್ತಿ ಮಳೆ ಇಲ್ಲದೆ ಜನ ಬಳಲುತ್ತಿದ್ದರೂ ಜಿಲ್ಲೆಯನ್ನು ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸಿಲ್ಲ. ಪರಿಹಾರ ಕಾಮಗಾರಿಗಳನ್ನು ಪ್ರಾರಂಭಿಸಿಲ್ಲ. ತೊಗಲು ಸರಕಾರದ ನಿರ್ಲಕ್ಷತನದಿಂದ ರೈತ ರೊಚ್ಚಿಗೆದ್ದಿದ್ದಾನೆ. ಹೋರಾಟದ ದಾರಿ ಹಿಡಿದಿದ್ದಾನೆ.

ಜಿಲ್ಲೆಯ ವಿವಿಧ ತಾಲ್ಲೂಕುಗಳಲ್ಲಿ ವಿರೋಧಿ ಪಕ್ಷಗಳ ರೈತರ ಹೋರಾಟ ಸಮಿತಿಯು ಸಮರ್ಥ ನಾಯಕತ್ವದಲ್ಲಿ ಚಳುವಳಿ ವಿಸ್ತರಿಸತೊಡಗಿದೆ. ಮಹಿಳೆಯರೂ ಹೋರಾಟದ ಮುಂಚೂಣಿಯಲ್ಲಿರುವುದು ಗಮನಾರ್ಹವಾಗಿದೆ. ವಿವಿಧ ತಾಲ್ಲೂಕುಗಳಲ್ಲಿ ನಡೆದ ಚಳುವಳಿಯ ವಿವರ ಕೆಳಗಿನಂತಿದೆ.

ಮುಳುಬಾಗಿಲು :

ದಿನಾಂಕ 18-11-80ರಂದು ಮುಳುಬಾಗಿಲಿನಲ್ಲಿ ರೈತರ ಬಹಿರಂಗ ಸಭೆ ನಡೆಯಿತು. ಜಿಲ್ಲಾ ರೈತ ಸಂಘದ ಉಪಾಧ್ಯಕ್ಷರಾದ ಕಾಂ. ಆರ್. ವೆಂಕಟ್ರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸರಕಾರವು ಸಹಕಾರಿ ಸಾಲಗಳ ಮನ್ನಾ ಬಗ್ಗೆ ತಾಳಿರುವ ಅರ್ಥವಿಲ್ಲದ ನೀತಿ ಹಾಗೂ ಕಟ್ಟಳೆಗಳ ಬಗ್ಗೆ, ಮಳೆಬೆಳೆ ಇಲ್ಲದಿದ್ದರೂ ಕ್ಷಾಮಪೀಡಿತ ಪ್ರದೇಶವೆಂದು ಘೋಷಿಸದಿರುವುದನ್ನು ಖಂಡಿಸಲಾಯಿತು.

ಸಭೆಯನ್ನು ಉದ್ದೇಶಿಸಿ ಕಾಂ. ಅಬ್ದುಲ್ ಮಜೀದ್, ಕಾಂ. ಜಿ. ಪಾಪಣ್ಣ ಮೊದಲಾದವರು ಮಾತನಾಡಿದರು. ನ್ಯಾಯಬದ್ಧ ಬೇಡಿಕೆಗಳಿಗೋಸ್ಕರ ದಿನಾಂಕ 24ರಿಂದ ಮುಳಬಾಗಿಲು ತಾಲ್ಲೂಕು ಕಛೇರಿ ಹಾಗೂ ಇತರೆ ಸರ್ಕಾರಿ ಕಛೇರಿಗಳ ಮುಂದೆ ನಿರಂತರವಾಗಿ ಪಿಕೆಟಿಂಗ್ ನಡೆಸಲು ತೀರ್ಮಾನಿಸಲಾಯಿತು. ಆ ಪ್ರಕಾರ ತಾಲ್ಲೂಕಿನ ರೈತರು 24ರಂದು ತಾಲ್ಲೂಕು ಕಛೇರಿ, ಕ್ಷೇತ್ರಾಭಿವೃದ್ಧಿ ಕಛೇರಿಗಳ ಎದುರು ಪಿಕೆಟಿಂಗ್ ನಡೆಸಿದಾಗ ಪೋಲೀಸರು 225 ಮಂದಿಯನ್ನು ಬಂಧಿಸಿ ಬಿಡುಗಡೆ ಮಾಡಿದರು. ದೊಲಸ್ಸಲ್ಲಿಯ ರಾಮಕೃಷ್ಣಪ್ಪ, ಕೋದಂಡರಾಮಯ್ಯ, ಟಿ ಎಸ್. ರಾಮಯ್ಯ ಬಂಧಿತರಲ್ಲಿ ಪ್ರಮುಖರು.

ಚಿಂತಾಮಣಿ :

10-11-80ರಂದು ಹೋರಾಟ ಸಮಿತಿಯ ಆದೇಶದಂತೆ ತಾಲ್ಲೂಕಿನ ಸಾವಿರಾರು ರೈತರು ಜಿಲ್ಲಾ ಸಂಚಾಲಕ ಕಾಂ. ಲಕ್ಷ್ಮಣರೆಡ್ಡಿ, ಅಶ್ವತ್ಥ ನಾರಾಯಣರೆಡ್ಡಿ, ತಾಲ್ಲೂಕ ಸಂಚಾಲಕ ನಾರಾಯಣಶೆಟ್ಟಿ ಮತ್ತಿತರರ ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಲಾಯಿತು. ತಮ್ಮ ಪ್ರಮುಖ ಬೇಡಿಕೆಗಳನ್ನೊಳಗೊಂಡ ಮನವಿ ಪತ್ರವನ್ನು ತಹಸೀಲ್ದಾರರಿಗೆ ಅರ್ಪಿಸಲಾಯಿತು. ನಂತರ ಬಹಿರಂಗ ಸಭೆ ತಾಲ್ಲೂಕು ಆಫೀಸ್ ಆವರಣದಲ್ಲಿ ನಡೆಯಿತು. ಸಭೆಯ ಅಧ್ಯಕ್ಷತೆಯನ್ನು ಜಿ.ವಿ. ಅಶ್ವತ್ಥ ನಾರಾಯಣರೆಡ್ಡಿ ವಹಿಸಿದ್ದರು. ಕಾಂ. ಶ್ರೀನಿವಾಸರೆಡ್ಡಿ ನೇತೃತ್ವದಲ್ಲಿ 12 ಜನರು ಪಿಕೆಟಿಂಗ್ ನಡೆಸಿ ಬಂಧಿತರಾದರು.

24-11-80ರಂದು ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 38 ಜನರು ಬಂಧಿತರಾದರು. ಲಕ್ಷ್ಮಣರೆಡ್ಡಿ,

[ಕಡೆಯ ಪುಟ ನೋಡಿ]

ಸಂಕ್ಷಿಪ್ತ ಸಮಾಚಾರಗಳು

ಕುಂದಾಪುರ

ದ.ಕ. ಜಿಲ್ಲಾ ಕುಂದಾಪುರ ತಾಲ್ಲೂಕಿನ ಜಡ್ಕಲ್ ಗ್ರಾಮದ ಸಲ್ಕೋಡ್‌ನಲ್ಲಿ ತಾರೀಕು 9-11-80 ರಂದು ರೈತರ ವಿಸ್ತೃತ ಸಭೆಯು ಶ್ರೀ ಮಂಜನಾಯ್ಕರವರ ಅಧ್ಯಕ್ಷತೆಯಲ್ಲಿ ಜರುಗಿತು.

ಸದ್ರಿಗ್ರಾಮದ ರೈತರು ನೆಟ್ಟು ಬೆಳೆಸಿದ ಫಸಲನ್ನು ಭೂಮಾಲಕರು ಬಲಾತ್ಕಾರದಿಂದ ಕಟಾವು ಮಾಡಲೆತ್ನಿಸಿದುದನ್ನು ತಾರೀಖು 8-10-80ರಂದು ಯುವಜನ ಸಂಘಟನೆಯ ಮುಖ್ಯ ಕಾರ್ಯಕರ್ತ ಎಚ್. ಎಸ್. ರಾಮನವರ ಮೇಲೆ ನಡೆದ ಗೂಂಡಾಗಳ ದೌರ್ಜನ್ಯವನ್ನು ಉಗ್ರವಾಗಿ ಖಂಡಿಸಲಾಯಿತು.

ನಂತರ 9 ಜನರಿರುವ ಹೊಸ ಗ್ರಾಮ ಸಮಿತಿಯನ್ನು ರಚಿಸಲಾಯಿತು, ಸಮಿತಿಯ ಅಧ್ಯಕ್ಷರಾಗಿ ಅಣ್ಣು ಪೂಜಾರಿ ಹಾಗೂ ಕಾರ್ಯದರ್ಶಿಯಾಗಿ ಎಚ್. ಬಸವನಾಯ್ಕನವರನ್ನು ಆಯ್ಕೆ ಮಾಡಲಾಯಿತು.

ಬೀದರ

ದಿನಾಂಕ 15-11-80ರಂದು ಕನ್ನಡದ ದಲಿತ ಕವಿ ಶ್ರೀ ಸಿದ್ಧಲಿಂಗಯ್ಯನವರಿಂದ ಬೀದರಜಿಲ್ಲಾ ಬಂಡಾಯ ಸಾಹಿತ್ಯ ಸಂಘಟನಾ ಸಮಿತಿ ಉದ್ಘಾಟನೆಯಾಯಿತು ಶ್ರೀ ಬಸವರಾಜ ಸಬರದ ಮತ್ತು ಶೀಲಾ ತಿವಾರಿ ಇವರನ್ನು ಜಿಲ್ಲೆಯ ಸಂಚಾಲಕರಾಗಿ ನೇಮಕಮಾಡಲಾಯಿತು. ಇದೇ ಸಂದರ್ಭದಲ್ಲಿ ಬಸವರಾಜ ಸಬರದ ಅವರ "ನನ್ನವರ ಹಾಡು" ಕವನ ಸಂಕಲನವನ್ನ ಶ್ರೀ ಸಿದ್ಧಲಿಂಗಯ್ಯ ಬಿಡುಗಡೆ ಮಾಡಿದರು. ಶ್ರೀ ಹನುಮಂತಪ್ಪ ಪಾಟೀಲ ಅಧ್ಯಕ್ಷತೆ ವಹಿಸಿದ್ದರು.

ಕುಂದಾಪುರ

ದಿನಾಂಕ 17-11-1980 ರಂದು ದ. ಕ ಜಿಲ್ಲಾ ಕುಂದಾಪುರ ಕೆಲಸಗಾರರ ಸಂಘದ ಕಾರ್ಯಕಾರಿ ಸಮಿತಿಯ ಸಭೆಯು ಸಂಘದ ಅಧ್ಯಕ್ಷರಾದ ಕಾಂ. ಅಬ್ರಹಾಂ ಕರ್ಕಡರವರ ಅಧ್ಯಕ್ಷತೆಯಲ್ಲಿ ನಡೆಯಿತು.

ಸಭೆಯ ಪ್ರಾರಂಭದಲ್ಲಿ ದಿನಾಂಕ 29-9-80ರಂದು ಬಸ್ ಅಪಘಾತದಲ್ಲಿ ಮೃತಪಟ್ಟ ಸಮಿತಿಯ ಸದಸ್ಯೆ ಹಾಗೂ ಮುಖ್ಯ ಕಾರ್ಯಕರ್ತರಾದ ಕುಮಾರಿ ರತ್ನನವರಿಗೆ ಶ್ರದ್ಧಾಂಜಲಿಯನ್ನರ್ಪಿಸಲಾಯಿತು.

ಕಾರ್ಯದರ್ಶಿಯವರಾದ ಕಾಂ. ಕೆ. ಶಂಕರ್‌ರವರು ಸಂಘದ ಚಟುವಟಿಕೆಯ ವರದಿಯನ್ನಿತ್ತರು.

ಬೆಂಗಳೂರು

ಬೆಂಗಳೂರಿನ ಮಹಾದೇವಪುರದಲ್ಲಿರುವ "ದೂರವಾಣಿ ಕೇಬಲ್ಸ್" ಫ್ಯಾಕ್ಟರಿಯ ಕಾರ್ಮಿಕರು ತಮ್ಮ ಬೇಡಿಕೆಗಳಿಗೋಸ್ಕರ 60 ದಿನಗಳಿಂದ ಹೋರಾಟದಲ್ಲಿದ್ದಾರೆ. ದಿನಾಂಕ 19-11-80ರಂದು ಫ್ಯಾಕ್ಟರಿಯ ಆಡಳಿತ ಕಚೇರಿ ಎದುರು ಕಾರ್ಮಿಕರು ಧರಣಾ ಮುಷ್ಕರವನ್ನು ಮಾಡಿದರು. ಸೌಹಾರ್ದಯುತವಾದ ಒಪ್ಪಂದಕ್ಕೆ ಮುಂದೆ ಬರುವಂತೆ ಆಡಳಿತ ವರ್ಗವನ್ನು ಸಂಘದ ಕಾರ್ಯದರ್ಶಿ ಕಾಂ. ಜನ್ ವಿನ್ಸೆಂಟ್ ಒತ್ತಾಯಿಸಿದ್ದಾರೆ.

ಬೆಳ್ತಂಗಡಿ

ಕಳೆದ ಎರಡು ತಿಂಗಳುಗಳಿಂದ ದ. ಕ. ಜಿಲ್ಲಾ ಬೆಳ್ತಂಗಡಿ ತಾಲ್ಲೂಕು ರೈತಸಂಘ ಪ್ರಾರಂಭಿಸಿದ್ದ ರೈತಚಳುವಳಿಯು ಇಂದು ರೈತರ ಸಾಮೂಹಿಕ ಅನ್ನಸತ್ಯಾಗ್ರಹದ ಹಂತವನ್ನು ತಲುಪಿತು. ದಿನಾಂಕ 20-11-80 ರಂದು ತಾಲ್ಲೂಕಿನ ನೂರಾರು ರೈತರು ಮೆರವಣಿಗೆಯಲ್ಲಿ ಘೋಷಣೆಗಳನ್ನು ಕೂಗುತ್ತಾ ಬೆಳಿಗ್ಗೆ ಹನ್ನೊಂದರಿಂದ ಸಾಯಂಕಾಲ 4 ಘಂಟೆಯವರೆಗೆ ತಾಲ್ಲೂಕು ಕಛೇರಿ ಎದುರು ಧರಣಿ ನಡೆಸಿದರು ತಾಲ್ಲೂಕು ರೈತಸಂಘದ ಕಾರ್ಯದರ್ಶಿ ಕೆ ವಿ ಯಾಳಚಿತ್ತಾಯ, ಜಿಲ್ಲಾ ರೈತಸಂಘದ ಪ್ರಧಾನ ಕಾರ್ಯವಾಹಕ ಕಾಮ್ರೇಡ್ ಜನಾರ್ಧನ ನಾಯಕ್, ಬಿ. ವಿಷ್ಣುಮೂರ್ತಿ ಮುಂತಾದವರನ್ನೊಳಗೊಂಡನಿಯೋಗ ತಹಶೀಲ್ದಾರರನ್ನು ಭೇಟಿಮಾಡಿ ರೈತರ ಬೇಡಿಕೆಗಳ ಮನವಿ ಅರ್ಪಿಸಿದರು. ನಂತರ ಬಹಿರಂಗ ಸಭೆ ನಡೆಯಿತು.

ಮಂಗಳೂರು

ಕಳೆದ ಆಗಸ್ಟ್ ತಿಂಗಳಿನಲ್ಲಿ ಉತ್ತರ ಕನ್ನಡದ ಶರಾವತಿಯಲ್ಲಿ ಬಂದ ಪ್ರವಾಹದ ಕಾರಣವಾಗಿ "ಶರಾವತಿ ಹಂಚಿನ ಕಾರ್ಖಾನೆ"ಯ ಕಾರ್ಮಿಕರು ತಮ್ಮ ಸರ್ವಸ್ವವನ್ನು ಕಳೆದುಕೊಂಡಿದ್ದರು. ಸಂಕಷ್ಟದಲ್ಲಿದ್ದ ಈ ಮಜೂರರಿಗೆ ಸೌತ್ ಕೆನರಾ ಟೈಲ್ ವರ್ಕರ್ಸ್ ಯೂನಿಯನ್, ಮಂಗಳೂರು ಮತ್ತು ಕುಂದಾಪುರದ ಹಂಚಿನ ಕಾರ್ಮಿಕರಿಂದ 6000 ರೂ ಗಳ ನಿಧಿಯನ್ನು ಸಂಗ್ರಹಿಸಿ ಕೊಡಲಾಗಿದೆ ಕರ್ನಾಟಕ ರಾಜ್ಯ ಸಿ. ಐ. ಟಿ ಯು. ಸಮಿತಿಯ 101ರೂ.ಗಳನ್ನು ಹಾಗೂ ಬೆಂಗಳೂರಿನ ಕ್ವಾಲಿಟಿ ಫುಡ್ ಪ್ರಾಡಕ್ಟ್ಸ್‌ನ ಕಾರ್ಮಿಕರು ಸಂಗ್ರಹಿಸಿದ 25 ರೂ.ಗಳನ್ನು ಮೇಲಿನ ಮೊತ್ತದಲ್ಲಿ ಸೇರಿಸಲಾಗಿದೆ.

●

ಕಾರ್ಮಿಕ ಇಲಾಖೆ ಎದುರು ಧರಣಿ

ಬೆಂಗಳೂರು :

ಸಿ. ಐ. ಟಿ ಯು. ಕರ್ನಾಟಕ ಪ್ರಾಂತ ಸಮಿತಿ ತೀರ್ಮಾನದ ರೀತಿ ಬೆಂಗಳೂರ ಜಿಲ್ಲಾ ಆಶ್ರಯದಲ್ಲಿ ತಾ. 21-11-80 ರಂದು ನಗರದ ಕಬ್ಬನ್ ಪಾರ್ಕ್‌ನಲ್ಲಿ ಸಾಯಂಕಾಲದವರೆಗೆ ಧರಣಾ ನಡೆಸಿದರು 21ರ ಬೆಳಗ್ಗೆ ಸಿಲ್ವರ್ ಜೂಬಲಿ ಪಾರ್ಕ್‌ನಿಂದ ನೂರಾರು ಕಾರ್ಮಿಕರು ಮೆರವಣಿಗೆ ಹೊರಟ ಕಾರ್ಮಿಕ ಇಲಾಖೆಯ ಕಾರ್ಮಿಕ ವಿರೋಧಿ ಘೋಷಣೆಗಳೊಂದಿಗೆ ಲೇಬರ್ ಆಫೀಸಿಗೆ ತೆರಳಿತು. ಕಾರ್ಮಿಕ ವಿವಾದಗಳನ್ನು ಬಗೆಹರಿಸುವಲ್ಲಿ ಆಗುತ್ತಿರುವ ವಿಳಂಬದ ಬಗ್ಗೆ, ಎಲ್ಲಾ ಹಂತದಲ್ಲಿ ಅಳವಾಗಿ ಬೇರೂರಿರುವ ಲಂಚಗುಳಿತನವನ್ನು ವಿರೋಧಿಸುವ ಅಂಶಗಳನ್ನೊಳಗೊಂಡ ಮನವಿ ಪತ್ರವನ್ನು ಲೇಬರ ಕಮೀಷನರರಿಗೆ ಮನವಿ ಅರ್ಪಿಸಲಾಯಿತು. ಜಾಯಿಂಟ್ ಲೇಬರ್ ಕಮೀಷನರು ಮನವಿ ಪತ್ರ ಸ್ವೀಕರಿಸಿ ತೊಂದರೆಗಳನ್ನು ನಿವಾರಿಸಲೆತ್ನಿಸುವದಾಗಿ ಭರವಸೆ ನೀಡಿದರು.

ನಂತರ ಮೆರವಣಿಗೆ ಲೇಬರ್ ಸೆಕ್ರೆಟರಿಯ ಆಫೀಸಿಗೆ ತೆರಳಿ ಅವರಿಗೂ ಮನವಿ ಸಲ್ಲಿಸಲಾಯಿತು. ಸಾಯಂಕಾಲದವರೆಗೂ ಕಬ್ಬನ್ ಪಾರ್ಕಿನಲ್ಲಿ ಧರಣಾ ನಡೆಸಿದ ನಂತರ ನಡೆದ ಸಭೆಯನ್ನುದ್ದೇಶಿಸಿ ಸಿ. ಐ ಟಿ. ಯು, ರಾಜ್ಯ ಕಾರ್ಯದರ್ಶಿ ಕಾಂ. ವಿ. ಜೆ. ಕೆ. ನಾಯರ್, ಬೆಂಗಳೂರು ಜಿಲ್ಲಾ ಸಿ. ಐ. ಟಿ. ಯು. ಕಾರ್ಯದರ್ಶಿ ಕಾಂ ಶ್ರೀನಿವಾಸ ಮಾತನಾಡಿದರು.

ಮೈಸೂರು :

21-11-80ರಂದು ಸಿ ಐ ಟಿ. ಯು ರಾಜ್ಯಸಮಿತಿಯ ಕರೆಯಂತೆ ಮೈಸೂರಿನಲ್ಲಿ ವಿವಿಧ ಕಾರ್ಮಿಕ ಸಂಘಗಳ ಪ್ರತಿನಿಧಿಗಳು ಸ್ಥಳೀಯ ಕಾರ್ಮಿಕ ಇಲಾಖೆಯ ಮುಂದೆ ಸಾಮೂಹಿಕ ಸತ್ಯಾಗ್ರಹ ನಡೆಸಿದರು. ಕಾರ್ಮಿಕ ವಿವಾದಗಳನ್ನು ವಿಳಂಬವಿಲ್ಲದೇ ಬಗೆಹರಿಸಬೇಕೆಂದೂ, ಕಾನೂನಿನಲ್ಲಿರುವ ಲೋಪದೋಷಗಳನ್ನು ಅನುಷ್ಠಾನಕ್ಕೆ ತರಬೇಕೆಂದೂ ಒತ್ತಾಯಿಸಿ ಮನವಿ ಸಲ್ಲಿಸಲಾಯಿತು. ಸಂಜೆ ನಡೆದ ಸಭೆಯನ್ನು ಉದ್ದೇಶಿಸಿ ಕಾಂ. ಎಂ ಎನ್ ಉಗ್ರಪ್ಪ, ಸಿ ಕೆ. ಮೋನ್ ಮತ್ತಿತರರು ಮಾತನಾಡಿ ಲೇಬರ್ ಇಲಾಖೆಯಲ್ಲಿ ನಡೆಯುತ್ತಿರುವ ಅನ್ಯಾಯಗಳನ್ನು ನಿದರ್ಶನಗಳೊಂದಿಗೆ ವಿವರಿಸಿದರು.

ಹಾಸನ :

ರಾಜ್ಯಸಮಿತಿಯ ಆದೇಶದ ಮೇರೆಗೆ ಕಾರ್ಮಿಕ ಇಲಾಖೆಯಲ್ಲಿನ ಲಂಚಗುಳಿತನ, ವಿಳಂಬ ನೀತಿಯನ್ನು ಪ್ರತಿಭಟಿಸಿ ಹಾಸನ ಜಿಲ್ಲೆಯ ನಾನಾಕಡೆ ಸಿ.ಐ.ಟಿ.ಯು.ಗೆ ಸೇರಿದ ಸಂಘಗಳು ಲೇಬರ್ ಇಲಾಖೆಯ ಎದುರು ಧರಣಾ ಸತ್ಯಾಗ್ರಹ ನಡೆಸಿದರು.

ಹಾಸನದಲ್ಲಿ ಸುಮಾರು 100 ಜನ ಕಾರ್ಮಿಕರು ಕಾಂ. ವಿ ಸುಕುಮಾರ್ ಮತ್ತು ಕಾಂ. ದೂಜರವರ ನೇತೃತ್ವದಲ್ಲಿ ಮೆರವಣಿಗೆ ನಡೆಸಿ ಡೆಪ್ಯುಟಿ ಲೇಬರ್ ಕಮೀಷನರರಿಗೆ ಮನವಿ ಅರ್ಪಿಸಿ ಧರಣಿ ಸತ್ಯಾಗ್ರಹ ನಡೆಸಿದರು.

ಸಕಲೇಶಪುರದಲ್ಲಿ ಸುಮಾರು 60 ಜನ ಕಾರ್ಮಿಕರು ಕಾಂ ಪಾಲ್ ಮತ್ತು ಕಾಂ ತನಿಯರವರ ನೇತೃತ್ವದಲ್ಲಿ ಸೀನಿಯರ್ ಲೇಬರ್ ಇನ್‌ಸ್ಪೆಕ್ಟರರ ಕಚೇರಿ ಎದುರು ಧರಣಿ ಸತ್ಯಾಗ್ರಹ ನಡೆಸಿದರು.

ಚಿಕ್ಕಮಗಳೂರು :

ಸಿ. ಐ. ಟಿ. ಯು. ಕರ್ನಾಟಕ ರಾಜ್ಯಮಂಡಳಿಯ ಕರೆಯ ಪ್ರಕಾರ 21-11-1980ರಂದು ಚಿಕ್ಕಮಗಳೂರಿನ ಅಸಿಸ್ಟೆಂಟ್ ಲೇಬರ್ ಕಮೀಷನರ ಕಛೇರಿಯ ಮುಂದೆ ಕಾಫಿ ತೋಟಗಳ ಮತ್ತು ಕಾಫಿ ಕ್ಯೂರಿಂಗ್ ಸಂಸ್ಥೆಗಳ ಕಾರ್ಮಿಕರನ್ನು ಪ್ರತಿನಿಧಿಸಿ 81 ಕಾರ್ಮಿಕರು ಕಾಂ. ಸಿ. ನಂಜುಂಡಪ್ಪ ಮತ್ತು ಕಾಂ. ಎ. ಕೆ. ವಿಶ್ವನಾಥರ ನೇತೃತ್ವದಲ್ಲಿ ಸತ್ಯಾಗ್ರಹ ನಡೆಸಿದರು. ಕೈಗಾರಿಕಾ ವಿವಾದಗಳನ್ನು ತಡಮಾಡದೆ ಕ್ಷಿಪ್ರಕಾಲದಲ್ಲಿ ಇತ್ಯರ್ಥಪಡಿಸಬೇಕು, ತೋಟ ಕಾರ್ಮಿಕರ ಮತ್ತು ಕಾಫಿ ಕ್ಯೂರಿಂಗ್ ಕಾರ್ಮಿಕರ ಕನಿಷ್ಟ ಕೂಲಿಯನ್ನು ಹೆಚ್ಚಿಸಬೇಕು, ಕಾರ್ಮಿಕ ಇಲಾಖೆಯ ಕಛೇರಿಗಳಲ್ಲಿ ಖಾಲಿಇರುವ ಹುದ್ದೆಗಳನ್ನೆಲ್ಲಾ ಕೂಡಲೇ ಭರ್ತಿಮಾಡಬೇಕು ಮುಂತಾದ ಬೇಡಿಕೆಗಳನ್ನುಳ್ಳ ಮನವಿಯನ್ನು ಅಸಿಸ್ಟೆಂಟ್ ಲೇಬರ್ ಕಮೀಷನರ್ ಅವರಿಗೆ ಕೊಡಲಾಯಿತು.

ರಾಜ್ಯದ ನೂತನ ಲೇಬರ್ ಕಮೀಷನರ್ ಬಿ. ಎನ್. ಚಿಟ್‌ಕಿರೂರ್ 21-11-1980ರಂದು ಚಿಕ್ಕಮಗಳೂರನ್ನು ಸಂದರ್ಶಿಸಿದಾಗ ಸಿ. ಐ. ಟಿ. ಯು ರಾಜ್ಯಮಂಡಳಿಯ ಪ್ರಧಾನ ಕಾರ್ಯದರ್ಶಿ ಕಾಂ ಸಿ. ನಂಜುಂಡಪ್ಪ ಮತ್ತು ರಾಜ್ಯಮಂಡಳಿಯ ಸದಸ್ಯ ಕಾಂ ಎ. ಕೆ. ವಿಶ್ವನಾಥ್ ಅವರನ್ನು ಭೇಟಿಮಾಡಿ ರಾಜ್ಯದ ಕಾರ್ಮಿಕರ ಬೇಡಿಕೆಗಳ ಬಗ್ಗೆ ಒಂದು ಮನವಿಯನ್ನರ್ಪಿಸಿ ಬೇಡಿಕೆಗಳನ್ನು ವಿವರಿಸಿದರು.

ಮೂಡಿಗೆರೆ :

ಸಿ. ಐ. ಟಿ. ಯು. ರಾಜ್ಯಮಂಡಳಿಯ ಕರೆಯ ಪ್ರಕಾರ 21-11-80 ರಂದು 97 ತೋಟಕಾರ್ಮಿಕರು ಮೂಡಿಗೆರೆಯ ಸೀನಿಯರ್ ಲೇಬರ್ ಇನ್‌ಸ್ಪೆಕ್ಟರ ಆಫೀಸಿನ ಮುಂದೆ ಸತ್ಯಾಗ್ರಹ ನಡೆಸಿದರು. ಲೇಬರ್ ಇನ್‌ಸ್ಪೆಕ್ಟರವರಿಗೆ ಮನವಿ ಇತ್ತರು.

ಪುತ್ತೂರು :

ದ. ಕ. ಜಿಲ್ಲಾ ಪುತ್ತೂರಿನಲ್ಲಿ ಕಾಂ. ಬಿ ರಾಮಕೃಷ್ಣನವರ ನೇತೃತ್ವದಲ್ಲಿ ಲೇಬರ್ ಇನ್‌ಸ್ಪೆಕ್ಟರವರನ್ನು ಭೇಟಿಯಾಗಿ ಕಾರ್ಮಿಕರು ಮನವಿಪತ್ರವನ್ನು ಕೊಟ್ಟರು.

●

ಬಿನ್ನಿಮಿಲ್ ಕಾರ್ಮಿಕರ ಹೋರಾಟ

ಸೌಹಾರ್ದ ಸಭೆ

ರಾಜ್ಯದಲ್ಲಿಯೇ ಹಿರಿದಾದ ಬೆಂಗಳೂರಿನ ಬಿನ್ನಿಮಿಲ್ 2-11-80ರಿಂದ ಸ್ಥಗಿತವಾಗಿ ಮಿಲ್‌ನಲ್ಲಿ ಕೆಲಸ ಮಾಡುತ್ತಿದ್ದ 7000 ಕಾರ್ಮಿಕರು ಬೀದಿಪಾಲಾಗಿದ್ದರು.

ಬಿನ್ನಿಮಿಲ್ ಬ್ರಿಟಿಷ್ ಮಾಲೀಕತ್ವದಲ್ಲಿದ್ದು 3ವರ್ಷಗಳ ಮೊದಲು ಈ ಮಿಲ್ ಸ್ವದೇಶಿ ಮಾಲೀಕರುಗಳ ಕೈಯಲ್ಲಿ ಬಂದಿದೆ. ಬಿನ್ನಿ ಕಾರ್ಮಿಕ ಸಂಘಕ್ಕೆ ಹಿರಿದಾದ ಪರಂಪರೆಯಿದ್ದು ಸ್ವಾತಂತ್ರ್ಯ ಹೋರಾಟದಲ್ಲಂತೂ ಬಿನ್ನಿ ಕಾರ್ಮಿಕರು ಸಕ್ರಿಯ ಪಾತ್ರ ವಹಿಸಿದ್ದರು.

ಪ್ರತಿಗಾಮಿ ಧೋರಣೆಯ ಶ್ರೀ ಡಿ. ವೆಂಕಟೇಶರು ಬಿನ್ನಿಮಿಲ್ ಕಾರ್ಮಿಕರ ನೇತೃತ್ವವನ್ನು ವಹಿಸಿದ್ದಂದಿನಿಂದ ಬಿನ್ನಿ ಕಾರ್ಮಿಕರು ರಾಜ್ಯದ ಕಾರ್ಮಿಕ ಹೋರಾಟದ ಪ್ರವಾಹದಲ್ಲಿ ಸೇರ್ಪಡೆಯಾಗದೇ ದೂರವೇ ಉಳಿದಿದ್ದರು. ಕರ್ನಾಟಕ ರಾಜ್ಯಸರಕಾರ ಜಾರಿಗೆ ತರಲು ಯೋಚಿಸಿದ್ದ "ಕರ್ನಾಟಕ ಅಗತ್ಯ ಸೇವಾ ಮಸೂದೆ"ಗೂ ಈ ಮಹಾನುಭಾವ ಬೆಂಬಲವಿತ್ತಿದ್ದನು. ಆಳುವ ವರ್ಗದ ಕೈಗೂಸಾಗಿದ್ದ ಡಿ. ವೆಂಕಟೇಶನ ನಾಯಕತ್ವವನ್ನು ಕೊನೆಗೂ ಬಿನ್ನಿ ಕಾರ್ಮಿಕರು ಧಿಕ್ಕರಿಸಿದ್ದುದು ಗಮನಾರ್ಹ.

12% ಬೋನಸ್ಸನ್ನು ಕೇಳಿ ಕಾರ್ಮಿಕರು ಆಡಳಿತ ವರ್ಗವನ್ನು ಒತ್ತಾಯಿಸುತ್ತಿದ್ದ ಸಮಯದಲ್ಲೇ ಡಿ. ವೆಂಕಟೇಶರ ನೇತೃತ್ವದಿಂದ ದೂರ ಸರಿದು ಎಂ.ಡಿ. ನಟರಾಜರ ನೇತೃತ್ವದಲ್ಲಿ ಕಾರ್ಮಿಕರು ವೇದಿಕೆಯೊಂದನ್ನು ರಚಿಸಿ ಹೋರಾಟದ ಕಣಕ್ಕಿಳಿದಿದ್ದರು. ತನ್ನ ಕೈತಪ್ಪಿ ಹೋದ ಸಂಘಟನೆಯನ್ನು ವಾಪಸ್ಸು ಪಡೆದುಕೊಳ್ಳಲು ಡಿ. ವೆಂಕಟೇಶ ಆಡಳಿತ ವರ್ಗದೊಂದಿಗೆ ಶಾಮೀಲಾಗಿ ಆಡಳಿತವರ್ಗ ದಿಢೀರಾಗಿ ಲಾಕ್‌ಔಟ್

(8ನೇ ಪುಟ ನೋಡಿ)

ಆರ್ಥಿಕ ಸಮೀಕ್ಷೆ

ಆಹಾರ ಧಾನ್ಯ ಒದಗಿಸುವುದರಲ್ಲಿಯೂ ರಾಜಕೀಯ !

ಆರ್. ಚಂದ್ರ

ಪ. ಬಂಗಾಳದಲ್ಲಿ 1980-81ರ ವರ್ಷದಲ್ಲಿ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರಲು ಬೇಕಾದಷ್ಟು ಆಹಾರ ಧಾನ್ಯಗಳನ್ನು ಒದಗಿಸಲು ಇಂದಿರಾ ಗಾಂಧಿಯ ಕೇಂದ್ರ ಸರ್ಕಾರ ನಿರಾಕರಿಸುತ್ತಿದೆ. ಈ ವರ್ಷ ಕೇಂದ್ರ ಗ್ರಾಮೀಣ ಪುನರುಜ್ಜೀವನ ಮಂತ್ರಿ ಖಾತೆಯು 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳಿಗೆ ಎಲ್ಲಾ ರಾಜ್ಯಗಳಿಗೆ ಒಟ್ಟು 44,00,000 ಟನ್ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಿದ್ದರೂ, ಕಾಂಗ್ರೆಸ್(ಐ) ಹೊರತಾದ ಎಡರಂಗ ಸರಕಾರವಿರುವ ಪ. ಬಂಗಾಳಕ್ಕೆ ಕೇವಲ 20000 ಟನ್ ಆಹಾರ ಧಾನ್ಯಗಳನ್ನು ಒದಗಿಸಿದೆ. ಹಾಗೆಯೇ, ಕಾಂಗ್ರೆಸ್(ಐ) ಹೊರತಾದ ಅಣ್ಣಾ ಡಿ.ಎಂ.ಕೆ.ಯ ಸರಕಾರವಿರುವ ತಮಿಳುನಾಡಿಗೂ ಕೇವಲ 27,000 ಟನ್ ಆಹಾರ ಧಾನ್ಯಗಳನ್ನು ಒದಗಿಸಿದೆ. ಯಾಕೆ ಈ ಪಕ್ಷಪಾತ?

ಪ. ಬಂಗಾಳದಲ್ಲಿ ಸೆಪ್ಟೆಂಬರ್‌ನಿಂದ ನವೆಂಬರ್‌ವರೆಗೆ ವ್ಯವಸಾಯ ಕೆಲಸಗಳಿಲ್ಲದೆ, ಬಹುಸಂಖ್ಯಾತ ಗ್ರಾಮೀಣ ಜನರು ನಿರುದ್ಯೋಗಿಗಳಾಗಿರುವುದರಿಂದ, ಅವರಿಗೆ ಸಕಾಲದಲ್ಲಿ ಆಹಾರ, ಉದ್ಯೋಗ ದೊರಕಿಸಲು ಪ.ಬಂಗಾಳದ ಎಡರಂಗ ಸರ್ಕಾರವು 1980-81ರ ವರ್ಷಕ್ಕೆ ಒಟ್ಟು 2,15,000 ಟನ್ ಆಹಾರ ಧಾನ್ಯಗಳನ್ನು ಬಿಡುಗಡೆ ಮಾಡಬೇಕೆಂದು ಕೇಂದ್ರವನ್ನು ಕೇಳಿಕೊಂಡಿತು. ಆದರೆ ಮೇ 80ರಲ್ಲಿ 20000 ಟನ್ ಧಾನ್ಯಗಳನ್ನು ಬಿಡುಗಡೆ ಮಾಡಿದ ನಂತರ ಒಂದು ಕಾಳನ್ನೂ ಹೆಚ್ಚಿಗೆ ಬಿಡುಗಡೆ ಮಾಡಲಿಲ್ಲ. ತಾತ್ಕಾಲಿಕವಾಗಿ ಆದರೂ 50000 ಟನ್ ಆಹಾರ ಧಾನ್ಯಗಳನ್ನು ಕೂಡಲೇ ಬಿಡುಗಡೆ ಮಾಡಲು ಕೇಳಿಕೊಂಡರೂ ಕೇಂದ್ರ ಸರಕಾರ ಒಪ್ಪಲಿಲ್ಲ. ಕನಿಷ್ಟ 20000 ಟನ್ ಆಹಾರ ಧಾನ್ಯಗಳನ್ನಾದರೂ ಕೇಂದ್ರವು 'ಸಹಾಯ' ರೂಪದಲ್ಲಿಲ್ಲವಾದರೂ, ಪ. ಬಂಗಾಳ ಸರಕಾರ ಕೇಂದ್ರ ಸರಕಾರಕ್ಕೆ ಹಣ ಕೊಟ್ಟು ಖರೀದಿಸಲು ಮುಂದಾದರೂ, ಕೇಂದ್ರ ಸರಕಾರ ಒಪ್ಪಲಿಲ್ಲ.

ಪರಿಣಾಮವಾಗಿ, ರಾಜ್ಯಾದ್ಯಂತ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳು ಸಾಕಷ್ಟು ಆಹಾರ ಧಾನ್ಯಗಳಿಲ್ಲದೆ ಸ್ಥಗಿತಗೊಂಡಿವೆ. ಜಿಲ್ಲೆ, ಪಂಚಾಯತು ಮಟ್ಟಗಳಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಗಳು ನಿಂತುಬಿಟ್ಟಿವೆ. ಅಸಂಖ್ಯಾತ ಗ್ರಾಮೀಣ ಬಡಜನರು ಪ. ಬಂಗಾಳದಲ್ಲಿ ಆಹಾರ ಧಾನ್ಯಗಳಿಲ್ಲದೆ, ಕೆಲಸವಿಲ್ಲದೆ ತುಂಬಾ ತೊಂದರೆಗೊಳಗಾಗಿದ್ದಾರೆ. ಯೋಜನಾ ಆಯೋಗದಂತೆ, 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳು ಇನ್ನು ಮುಂದೆ ಬೃಹತ್ ಪ್ರಮಾಣದಲ್ಲಿ ಗ್ರಾಮೀಣ ಉದ್ಯೋಗಾವಕಾಶಗಳನ್ನು ಒದಗಿಸಲು ಮತ್ತು ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಸಾಧ್ಯವಾಗಬೇಕೆಂದಿರುವಾಗ, ಪ. ಬಂಗಾಳದಲ್ಲಿ ಈ ಕಾರ್ಯಕ್ರಮಗಳು ಆಹಾರ ಧಾನ್ಯಗಳ ಕೊರತೆಯಿಂದಾಗಿ ಕುಂಠಿತಗೊಳ್ಳುವಂತಾಗಲು ಕಾರಣ [illegible] ಕೇಂದ್ರ ಸರಕಾರವೇ! ಪ. ಬಂಗಾಳದ ಎಡರಂಗ ಸರಕಾರದೊಡನೆ ಸಹಕರಿಸುತ್ತಿಲ್ಲ.

ಕೇಂದ್ರದಲ್ಲಿರುವ ಇಂದಿರಾ ಸರಕಾರ ಪ. ಬಂಗಾಳದ ಎಡರಂಗ ಸರಕಾರಕ್ಕೆ ಉದ್ದೇಶಪೂರ್ವಕವಾಗಿ ಕಿರುಕುಳ ಕೊಡುತ್ತಿದೆ. ಕಳೆದ ಮೂರು ವರ್ಷಗಳಲ್ಲಿ ಪ. ಬಂಗಾಳದ ಎಡರಂಗ ಸರಕಾರವು ಭೂಸುಧಾರಣೆ, ಪಾಲು ಬೆಳೆಗಾರರ ರಕ್ಷಣೆ, 'ಕೆಲಸಕ್ಕೆ-ಕಾಳು' ಕಾರ್ಯಕ್ರಮ, ಇತ್ಯಾದಿಯಿಂದ ರಾಜ್ಯದ ಅಸಂಖ್ಯಾತ ಬಡಜನರ ವಿಶ್ವಾಸವನ್ನು ಗಳಿಸಿದೆ. ಗ್ರಾಮೀಣ ಬಡರೈತರು ಮತ್ತು ಕೃಷಿಕೂಲಿಗಾರರು ಭೂಮಾಲಕರ, ಶ್ರೀಮಂತ ರೈತರ ಹಾಗೂ ಸಾಲಗಾರರ ಬಿಗಿಮುಷ್ಟಿಯಿಂದ ಬಿಡುಗಡೆ ಹೊಂದುತ್ತಿದ್ದಾರೆ. ವ್ಯವಸಾಯ, ವಸತಿ, ಉದ್ಯೋಗ, ಆಹಾರ, ಆದಾಯಗಳಲ್ಲಿ ಅವರು ಸಾಕಷ್ಟು ಪ್ರಗತಿ ಪಡೆಯುತ್ತಿದ್ದಾರೆ. ಪರಿಣಾಮವಾಗಿ, ಕಳೆದ ಪಂಚಾಯತು ಮತ್ತು ಲೋಕಸಭಾ ಚುನಾವಣೆಗಳಲ್ಲಿ ಕಾಂಗ್ರೆಸ್ (ಐ) ಹಾಗೂ ಇತರ ವಿರೋಧಿ ಪಕ್ಷಗಳನ್ನು ಹಿಮ್ಮೆಟ್ಟಿಸಿ ಎಡರಂಗವು ಭಾರಿ ಜಯಗಳಿಸಿತ್ತು. ಎಡರಂಗ ಸರಕಾರವು ಪ. ಬಂಗಾಳದಲ್ಲಿ ಐದು ವರ್ಷಗಳ ಪೂರ್ಣಾವಧಿಯವರೆಗೆ ಅಧಿಕಾರದಲ್ಲಿದ್ದರೆ, ಮುಂದೆ ನಡೆಯುವ ಯಾವ ಚುನಾವಣೆಗಳಲ್ಲಿಯೂ ಕಾಂಗ್ರೆಸ್(ಐ) ಗೆಲ್ಲುವ ಸಾಧ್ಯತೆಯೇ ಇಲ್ಲ ಎಂದು ಖಾತರಿಯಾಗುತ್ತಿದೆ. ಆದುದರಿಂದಲೇ ಎಡರಂಗ ಸರಕಾರದ ಜನಪ್ರಿಯ ಆರ್ಥಿಕ ಕಾರ್ಯಕ್ರಮಗಳು ಯಶಸ್ವಿಯಾಗಿ ನಡೆಯಗೊಡದಂತೆ ಕೇಂದ್ರದಲ್ಲಿನ ಇಂದಿರಾಗಾಂಧಿ ಸರಕಾರ ಪ. ಬಂಗಾಳದ ಸರಕಾರದೊಡನೆ ಅಸಹಕಾರ ಚಳವಳಿ ನಡೆಸುತ್ತಿದೆ. 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳಿಗೆ ಆಹಾರ ಧಾನ್ಯಗಳನ್ನು ಸಕಾಲದಲ್ಲಿ ಸಾಕಷ್ಟು ಪ್ರಮಾಣದಲ್ಲಿ ಒದಗಿಸಿಕೊಡದೆ, ಪ. ಬಂಗಾಳದ ಎಡರಂಗ ಸರಕಾರಕ್ಕೆ ಕಿರುಕುಳಕೊಡುತ್ತಿದೆ. ಆಹಾರ ಧಾನ್ಯ ಒದಗಿಸುವುದರಲ್ಲಿಯೂ ರಾಜಕೀಯ ನಡೆಸುತ್ತಿದೆ!

ಪ. ಬಂಗಾಳಕ್ಕೆ ಆಹಾರ ಧಾನ್ಯಗಳನ್ನು ಒದಗಿಸದೇ ಇರುವ ಕೇಂದ್ರ ಸರಕಾರವು ಕೆಲವೊಂದು ಕುಂಟು ನೆಪಗಳನ್ನು ಒಡ್ಡುತ್ತಿದೆ. ಅವುಗಳನ್ನು ಒಂದೊಂದಾಗಿ ಪರಿಶೀಲಿಸೋಣ.

1). 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳಿಗೆ ಕೇಂದ್ರವು ಒದಗಿಸಿದ ಆಹಾರ ಧಾನ್ಯಗಳ [illegible] ಶೇ. 50 ರಷ್ಟಾದರೂ ರಾಜ್ಯ ಸರಕಾರ [illegible] ದಾಖಲೆ ತೋರಿಸಿದರೆ ಮಾತ್ರ ನಿಶ್ಚಿತ ಪ್ರಮಾಣದ ಆಹಾರ ಧಾನ್ಯಗಳನ್ನು ಒದಗಿಸಬಹುದೆಂದು ಕೇಂದ್ರ ಸರಕಾರದ ವಾದ. ಪ. ಬಂಗಾಳ ಸರಕಾರವು ಇಂತಹ ದಾಖಲೆಗಳನ್ನು ಒದಗಿಸಲು ವಿಫಲವಾಗಿದೆಯೆಂದು ಕೇಂದ್ರ ಸರಕಾರದ ಆಪಾದನೆ. ಇದು ನಿಜವೇ?

ಈ ಆಪಾದನೆಯಲ್ಲಿ ಎಳ್ಳಷ್ಟೂ ಸತ್ಯವಿಲ್ಲ. ಪ. ಬಂಗಾಳ ಸರಕಾರ ಹಾಗೂ ಮುಖ್ಯ ಮಂತ್ರಿ ಶ್ರೀ. ಜ್ಯೋತಿ ಬಸು ಕೇಂದ್ರಕ್ಕೆ ಸಲ್ಲಿಸಿದ ಟಿಪ್ಪಣಿಗಳೂ ಕಾಗದ ಪತ್ರಗಳೂ ಕೇಂದ್ರ ಸರಕಾರದ ಈ ಆಪಾದನೆಯನ್ನು ಅಪ್ಪಟ ಸುಳ್ಳು ಎಂದು ಸಾಬೀತುಗೊಳಿಸಿವೆ.

1977-78, 1978-79 ಮತ್ತು 1979-80 ಈ ಮೂರು ವರುಷಗಳಲ್ಲಿ ಪ. ಬಂಗಾಳಕ್ಕೆ 'ಕೆಲಸಕ್ಕೆ ಕಾಳು' ಯೋಜನೆಯಲ್ಲಿ ಒಟ್ಟು 416000 ಟನ್ ಆಹಾರ ಧಾನ್ಯಗಳನ್ನು ಒದಗಿಸಲಾಗಿತ್ತು. ಅದರಲ್ಲಿ 347000 ಟನ್ ಆಹಾರ ಧಾನ್ಯಗಳನ್ನು ಇಷ್ಟರಲ್ಲಿಯೇ ಬಳಸಿರುವ ಬಗ್ಗೆ ಸಂಪೂರ್ಣ ದಾಖಲೆಯನ್ನು ಕೇಂದ್ರಕ್ಕೆ ಒಪ್ಪಿಸಲಾಗಿದೆ. ಅಂದರೆ ಬಳಕೆಯ ಪ್ರಮಾಣವು ಒಟ್ಟು ಒದಗಿಸಿದ ಪ್ರಮಾಣದ ಶೇ 83 ರಷ್ಟಾಗಿದೆ! ಕೇಂದ್ರ ಸರಕಾರ ನಿರೀಕ್ಷಿಸಿದ್ದು ಶೇ. 50 ಮಾತ್ರ!

1979-80 ರ ವರ್ಷದಲ್ಲಿ ಈ ಕಾರ್ಯಕ್ರಮಕ್ಕೆ ಕೇಂದ್ರವು ಪ. ಬಂಗಾಳಕ್ಕೆ 244885 (ಹಿಂದಿನ ವರ್ಷದ ಬಾಕಿ ಸೇರಿ) ಆಹಾರ ಧಾನ್ಯಗಳನ್ನು ಒದಗಿಸಿತ್ತು. ರಾಜ್ಯಸರಕಾರವು ಅದರಲ್ಲಿ 157278 ಟನ್ ಬಳಸಿದ ದಾಖಲೆಯನ್ನು ಕೇಂದ್ರ ಸರಕಾರಕ್ಕೆ ಕೊಟ್ಟಿತ್ತು. ಅಂದರೆ ಬಳಕೆಯ ಪ್ರಮಾಣವು ಶೇ 64 ರಷ್ಟಾಗಿತ್ತು. ಫುಡ್ ಕಾರ್ಪೊರೇಶನ್ ಸಂಗ್ರಹಾಲಯದಿಂದ ಆಹಾರ ಧಾನ್ಯಗಳನ್ನು ಸಾಗಿಸಿದರೆ ಅವುಗಳನ್ನು ಬಳಸಿದಂತೆಯೇ ಎಂದು ಕೇಂದ್ರ ಸರಕಾರ ತಿಳಿಯುತ್ತದೆ. ಈ ದೃಷ್ಟಿಯಿಂದ ಆಗೋಸ್ಟ್ 80 ರಷ್ಟರಲ್ಲಿ 244885 ಟನ್ ಆಹಾರ ಧಾನ್ಯಗಳಲ್ಲಿ 2,17,300 ಟನ್‌ಗಳಷ್ಟು, ಅಂದರೆ ಶೇ 70 ರಷ್ಟು ಬಳಸಿ ದಾಖಲೆ ದೊರೆಯುವುದು. ಕೇಂದ್ರಸರಕಾರದ ನಿರೀಕ್ಷೆ ಕೇವಲ 50%ರಷ್ಟು ಬಳಕೆಯ ದಾಖಲೆ. ಪ. ಬಂಗಾಳದ ಸರಕಾರದ ಬಳಕೆಯ ಪ್ರಮಾಣ ಕಳೆದ ವರ್ಷ ಹಾಗೂ ಹಿಂದಿನ ಮೂರೂ ವರ್ಷಗಳಲ್ಲಿ ಕೇಂದ್ರಸರಕಾರದ ನಿರೀಕ್ಷೆಗಿಂತ ಹೆಚ್ಚಾಗಿಯೇ ಇದೆ.

ಆದರೆ, ಕೇಂದ್ರ ಈಗ ಕೇಳುತ್ತಿರುವುದು ಏಪ್ರಿಲ್ 80ರ ನಂತರದ ಅಲ್ಪಾವಧಿಯಲ್ಲಿನ ಬಳಕೆಯ ದಾಖಲೆ!

ಬಳಕೆಯ ದಾಖಲೆಯ ವಿಷಯದಲ್ಲಿ ಪ. ಬಂಗಾಳದ ಎಡರಂಗದ ನಿಯಮಗಳು ಕೇಂದ್ರದ ಹಾಗೂ ಇತರ ರಾಜ್ಯಗಳ ನಿಯಮಗಳಿಗಿಂತ ತುಂಬಾ ಬಿಗಿಯಾದಿವೆ ಎಂದು ಇಲ್ಲಿ ನೆನಪಿಡಬೇಕು.

ಕಾಂಗ್ರೆಸ್ (ಐ) ರಾಜ್ಯಗಳಲ್ಲಿ ಜಿಲ್ಲಾ ಮ್ಯಾಜಿಸ್ಟ್ರೇಟರ್‌ಗಳ ಮೇಲ್ವಿಚಾರಣೆಯಲ್ಲಿ 'ಕೆಲಸಕ್ಕೆ-ಕಾಳು' ಯೋಜನೆಗೆ ಆಹಾರಧಾನ್ಯಗಳ ವಿತರಣೆಯಾಗುವುದು. ಆಹಾರಧಾನ್ಯಗಳನ್ನು ಮೊದಲು ಪಡೆಯುವುದು ಕಂಟ್ರಾಕ್ಟರುಗಳು. ಫುಡ್ ಕಾರ್ಪೊರೇಶನ್‌ನ ಸಂಗ್ರಹಾಲಯದಿಂದ ಕಂಟ್ರಾಕ್ಟರುಗಳು ನಿಶ್ಚಿತ ಪ್ರಮಾಣದ ಆಹಾರಧಾನ್ಯಗಳನ್ನು ಸಾಗಿಸಬಹುದು ಎಂದು ಮ್ಯಾಜಿಸ್ಟ್ರೇಟರ್‌ಗಳು ಆಜ್ಞೆ ಮಾಡಿದ ಕೂಡಲೇ, ಅಷ್ಟು ಪ್ರಮಾಣದ ಆಹಾರಧಾನ್ಯಗಳು 'ಕೆಲಸಕ್ಕೆ-ಕಾಳು' ಯೋಜನೆಗೆ ಬಳಸಲಾಯಿತು. ಎರಡು ದಾಖಲೆಯಾದಂತೆ! ಮುಂದೆ, ಕಂಟ್ರಾಕ್ಟರ್‌ಗಳು ಆಹಾರಧಾನ್ಯಗಳನ್ನು ಮುಕ್ತ ಮಾರುಕಟ್ಟೆಗೆ ಒಯ್ದು ಮಾರಾಟಮಾಡಿ ಲಾಭಗಿಟ್ಟಿಸುತ್ತಾರೋ, ಅಥವಾ 'ಕೆಲಸಕ್ಕೆ-ಕಾಳು' ಯೋಜನೆಯಂತೆ ಸಂಬಂಧಪಟ್ಟ ಗ್ರಾಮೀಣ ಪ್ರದೇಶಗಳಿಗೆ ಒದಗಿಸುತ್ತಾರೋ ಎಂಬುದನ್ನು ಯಾರೂ ಕೇಳುವವರಿಲ್ಲ. ಹೆಚ್ಚಾಗಿ ಕಂಟ್ರಾಕ್ಟರುಗಳು ಕಾಂಗ್ರೆಸ್ (ಐ) ಪುಢಾರಿಗಳೇ ಆಗಿದ್ದು, ಚುನಾವಣೆಯನಂತರ ತಮ್ಮ ಬೊಕ್ಕಸ ತುಂಬಿಸಲು 'ಕೆಲಸಕ್ಕೆ-ಕಾಳು' ಯೋಜನೆಯಲ್ಲಿ ಬಿಡುಗಡೆ ಮಾಡಿದ ಆಹಾರಧಾನ್ಯಗಳನ್ನು ಧಾರಾಳವಾಗಿ ಬಳಸುತ್ತಾರೆ! ಯಾರೂ ಹೇಳುವವರೂ ಇಲ್ಲ, ಕೇಳುವವರೂ ಇಲ್ಲ.

ಆದರೆ, ಪ. ಬಂಗಾಳದ ನಿಯಮಗಳೇ ಬೇರೆ. ಈ ರಾಜ್ಯದಲ್ಲಿ 'ಕೆಲಸಕ್ಕೆ-ಕಾಳು' ಯೋಜನೆಗೆ ಒದಗಿಸಿದ ಆಹಾರಧಾನ್ಯಗಳನ್ನು ಸರಕಾರಿ ಏಜನ್ಸಿಗಳು ಫುಡ್ ಕಾರ್ಪೊರೇಶನ್ ಸಂಗ್ರಹಾಲಯದಿಂದ ಜಿಲ್ಲೆಗಳಿಗೆ, ಹಳ್ಳಿಗಳಿಗೆ ಸಾಗಿಸುತ್ತವೆ. ಜಿಲ್ಲಾ ಸಮಿತಿಗಳು, ಪಂಚಾಯತುಗಳು ಅವುಗಳನ್ನು ಪಡೆಯುತ್ತವೆ. ಚುನಾಯಿತ ಜನಪ್ರಿಯ ಜಿಲ್ಲಾ ಹಾಗೂ ಗ್ರಾಮೀಣ ಪಂಚಾಯತುಗಳು ತಾವೇ ನಿರ್ಧರಿಸಿದ 'ಕೆಲಸಕ್ಕೆ-ಕಾಳು' ಕಾರ್ಯಕ್ರಮಗಳಿಗೆ ಹೀಗೆ ಒದಗಿಸಿದ ಧಾನ್ಯಗಳನ್ನು ಬಳಸುತ್ತವೆ. ಆಮೇಲೆ, ಆಹಾರ ಧಾನ್ಯಗಳ ಬಳಕೆಯು, ಕಾರ್ಯಕ್ರಮಗಳನ್ನು ಕಾರ್ಯಗತಗೊಳಿಸಿದ ಕುರಿತು ವರದಿಗಳನ್ನು ರಾಜ್ಯಸರಕಾರಕ್ಕೆ ಸಲ್ಲಿಸುತ್ತವೆ. ಇಂತಹ ನೂರಾರು ವರದಿಗಳ ಆಧಾರದಿಂದ ಒದಗಿಸಿದ ಆಹಾರ ಧಾನ್ಯಗಳಲ್ಲಿ ಎಷ್ಟು ಬಳಕೆ ಆಯಿತು ಎಂದು ಕಾಲಕಾಲಕ್ಕೆ ಕೇಂದ್ರಸರಕಾರಕ್ಕೆ ರಾಜ್ಯಸರಕಾರವು ವರದಿ ಸಲ್ಲಿಸುತ್ತದೆ. ಸಹಜವಾಗಿಯೇ, ಅಲ್ಪಾವಧಿಯಲ್ಲಿ ಬಳಕೆಯ ಪ್ರಮಾಣದ ದಾಖಲೆ ಕೊಡಲು ಕಷ್ಟವಾಗುತ್ತದೆ. ಇದಕ್ಕೆ ಸಾಕಷ್ಟು ಸಮಯಾವಕಾಶ ಬೇಕಾಗುವುದು. ಕಾಂಗ್ರೆಸ್ (ಐ) ರಾಜ್ಯಗಳಂತೆ ಮ್ಯಾಜಿಸ್ಟ್ರೇಟರ್‌ಗಳು ಕಂಟ್ರಾಕ್ಟರ್‌ಗಳಿಗೆ ಫುಡ್ ಕಾರ್ಪೊರೇಶನಿನ ಸಂಗ್ರಹಾಲಯದಿಂದ ಆಹಾರಧಾನ್ಯಗಳನ್ನು ಸಾಗಿಸಬಹುದು ಎಂದು ಆಜ್ಞೆಕೊಟ್ಟದ್ದೇ ಬಳಕೆಯ ದಾಖಲೆಯಾಗುವುದಿಲ್ಲ. ಇದು ಮುಖ್ಯ ವಿಷಯ. ಪ. ಬಂಗಾಳದ ಎಡರಂಗ ಸರಕಾರವು 'ಕೆಲಸಕ್ಕೆ-ಕಾಳು' ಯೋಜನೆಗೆ ಒದಗಿಸಿದ ಆಹಾರಧಾನ್ಯಗಳನ್ನು ಖಾಸಗೀ ಕಂಟ್ರಾಕ್ಟರುಗಳಿಗೆ ಕೊಡುವುದಿಲ್ಲ. ಅದಕ್ಕೆ ಅವರ ಹಿತಾಸಕ್ತಿಗಳನ್ನು ಎತ್ತಿಹಿಡಿಯುವ ರಾಜ್ಯದ ಮತ್ತು ಕೇಂದ್ರದ ಕಾಂಗ್ರೆಸ್ (ಐ) ಪುಢಾರಿಗಳಿಗೆ ಎಡರಂಗ ಸರಕಾರದ ಮೇಲೆ ಸಿಟ್ಟು! ಹೇಗಾದರೂ ಈ ಸರಕಾರವನ್ನು ಉರುಳಿಸಬೇಕೆಂದು ಪಿತೂರಿ!

2. 'ಕೆಲಸಕ್ಕೆ-ಕಾಳು' ಯೋಜನೆಯಲ್ಲಿ ಎಡರಂಗ ಪಕ್ಷಗಳಿಗೇ ಹೆಚ್ಚು ಪ್ರಾಶಸ್ತ್ಯ ಸಿಗುತ್ತಿದೆ, ಪ್ರಯೋಜನವಾಗುತ್ತಿದೆ ಎಂದು ಇನ್ನೊಂದು ಅಪವಾದ. ಆದುದರಿಂದ ಈ ಯೋಜನೆಯನ್ನು ಪ್ರಾದೇಶಿಕ ಮಟ್ಟದಲ್ಲಿ ಸರ್ವಪಕ್ಷಗಳ ಸಮಿತಿಯ ಮೇಲ್ವಿಚಾರಣೆಯಲ್ಲಿ ಜಿಲ್ಲಾ ಕಲೆಕ್ಟರ ನೇತೃತ್ವದಲ್ಲಿ ಕಾರ್ಯಗತಗೊಳಿಸಬೇಕೆಂದು ಕೇಂದ್ರದ ಆದೇಶ. ಇದು ಸಂವಿಧಾನ ಬದ್ಧವಾದುದೆ? ಇಲ್ಲ. ಈ ಶರತ್ತು ಮೊದಲು ಇರಲಿಲ್ಲ. ಈಗ ದುರುದ್ದೇಶದಿಂದ ಹೇರಿಸಿದ್ದು.

ಪ. ಬಂಗಾಳದಲ್ಲಿರುವುದು ಎಡರಂಗ ಸರಕಾರ. ಕೇಂದ್ರ ಸರ್ಕಾರದ, ಯೋಜನಾ ಆಯೋಗದ ನಿರ್ಣಯಗಳಂತೆ, ಪಕ್ಷಭೇದಗಳಿಲ್ಲದೆ 'ಕೆಲಸಕ್ಕೆ-ಕಾಳು' ಯೋಜನೆಗೆ ನಿಗದಿಯಾದ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ರಾಜ್ಯಗಳಿಗೆ ಒದಗಿಸುವುದು ಕೇಂದ್ರ ಸರಕಾರದ ಕರ್ತವ್ಯ. ಅಂತಹ ಯೋಜನೆಯ ಕಾರ್ಯಕ್ರಮಗಳಿಗೆ ರಾಜ್ಯ ಸರಕಾರಗಳೇ ಧನಸಹಾಯ ಮಾಡಬೇಕಾಗುವುದು, ಆದುದರಿಂದ ಯೋಜನೆಯನ್ನು ಕಾರ್ಯಗತಗೊಳಿಸುವುದು ರಾಜ್ಯ ಸರಕಾರದ ಹೊಣೆಗಾರಿಕೆ, ಕೇಂದ್ರವು ಇದರಲ್ಲಿ ಹಸ್ತಕ್ಷೇಪ ಮಾಡುವಂತಿಲ್ಲ. ಪ. ಬಂಗಾಳದ ಎಡರಂಗ ಸರಕಾರವು ಈ ಯೋಜನೆಯನ್ನು ಚುನಾಯಿತ, ಜನಪ್ರಿಯ ಜಿಲ್ಲಾ ಸಮಿತಿಗಳೂ ಗ್ರಾಮೀಣ ಪಂಚಾಯತುಗಳೂ ಕಾರ್ಯಗತಗೊಳಿಸುವಂತೆ ಅವುಗಳಿಗೆ ಅಧಿಕಾರ ಹಾಗೂ ಧನಸಹಾಯ ನೀಡಿದೆ. ಜಿಲ್ಲಾ ಕಲೆಕ್ಟರ್ ಯೋಜನೆಯನ್ನು ಕಾರ್ಯಗತಗೊಳಿಸುವ ಆದೇಶ ಅಧಿಕಾರಿಯೇ ಹೊರತು, ಕೇಂದ್ರ ಸರಕಾರ ಅಪೇಕ್ಷಿಸುವಂತೆ ಅವನಿಗೆ ಮನಬಂದಂತೆ ಯೋಜನೆಯನ್ನು ಕಾರ್ಯಗತಗೊಳಿ[illegible]

(6ನೇ ಪುಟ ನೋಡಿ)

ಮಾರ್ಕ್ಸ್‌ವಾದದ ಬಗ್ಗೆ ಆರೆಸ್ಸೆಸ್‌ನ ಅಳಲು

—ಸ್ಟಾನ್ಲಿ ವಾಜ್

"ವಿಕ್ರಮ" ವಾರಪತ್ರಿಕೆಯನ್ನು ಓದುವುದಕ್ಕೆ ಸ್ವಾರಸ್ಯಕರವಾದುದು. ಅದರಲ್ಲೂ ಮಧ್ಯ ಪುಟಗಳಲ್ಲಿ "ಚಿಂತನ ಕ್ಷಣ" ಶೀರ್ಷಿಕೆಯಡಿಯಲ್ಲಿ ಹೊ.ವೆ. ಶೇಷಾದ್ರಿಯವರು ಬರೆಯುವುದನ್ನು ಓದಲು ಒಂದು ರೀತಿಯ ತಮಾಷೆಯೇ ಆಗಿರುತ್ತದೆ. ಅದರಲ್ಲೂ ಅವರು ಮಾರ್ಕ್ಸ್‌ವಾದದ ಬಗ್ಗೆ, ಕಮ್ಯುನಿಸ್ಟರ ಬಗ್ಗೆ ಬರೆಯುತ್ತಾರೆ ಅದನ್ನು ಓದುವುದಕ್ಕಂತೂ ಇನ್ನೂ ತಮಾಷೆಯೇ ಬೇರೆ ಆಗಿರುತ್ತದೆ.

ಶೇಷಾದ್ರಿಯವರು "ವಿಕ್ರಮದ" 12-9-80 ಮತ್ತು 19-9-80 ರ ಸಂಚಿಕೆಗಳಲ್ಲಿ ಚೀನದ ಬಗ್ಗೆ ಬರೆದಿದ್ದಾರೆ.

ಚೀನಾದಲ್ಲಿ ಕಮ್ಯುನಿಸ್ಟ್ ಪಕ್ಷದ ಕೇಂದ್ರ ಸಮಿತಿ ಸಭೆಯಲ್ಲಿ ಮಾತನಾಡುತ್ತಾ ಚೀನಾದ ಕಮ್ಯುನಿಸ್ಟ್ ಪಕ್ಷದ ಮುಖಂಡ ಹುವಾ, ಮಾವೋ ತ್ಸೆ ತುಂಗ್‌ರವರ ನೇತೃತ್ವದಲ್ಲಿ "ಸಾಂಸ್ಕೃತಿಕ ಕ್ರಾಂತಿಯ ಘಟ್ಟದಲ್ಲಿ ಬಂದ ದೋಷಗಳನ್ನು ಬಣ್ಣಿಸಿದ ಎಂದೆನ್ನುತ್ತಾರೆ. ಮಾವೋ ಬೇಕಾದಷ್ಟು ತಪ್ಪು ಮಾಡಿದ ಏಕೆಂದರೆ ಅವನೊಬ್ಬ ಮಾನವ ಜೀವಿಯಾಗಿದ್ದ ಎಂದು ಹುವಾ ಹೇಳಿದರೆಂದು ಸ್ವತಃ ಶೇಷಾದ್ರಿಯವರೇ ಹೇಳುತ್ತಾರೆ.

ಮಾವೋ ತ್ಸೆ ತುಂಗರ ನೇತೃತ್ವದಲ್ಲಿ ಬಂದ ದೋಷಗಳನ್ನು ಚೀನಾದ ಪಕ್ಷ ವಿಶ್ಲೇಷಿಸುವುದರಲ್ಲಿ ತಪ್ಪೇನೂ ಇಲ್ಲ. ಮಾವೋ ದೇವರೆಂದು ಅವರು ಎಂದಿಗೂ ತಪ್ಪು ಮಾಡುವುದಿಲ್ಲ ಎಂದು ಎಂದಿಗೂ ಕಮ್ಯುನಿಸ್ಟರು ಯಾರು ನುಡಿಯಲಿಲ್ಲ ಆದರೆ ಮಾವೋತ್ಸೆತುಂಗ್ ಒಬ್ಬ ಕ್ರಾಂತಿಕಾರಿ ಅರೆ ವಸಾಹತುವಾಗಿದ್ದ, ಸಾಮ್ರಾಜ್ಯಶಾಹಿಗಳ ಕೈಯಲ್ಲಿ ಶೋಷಣೆಗೆ ಒಳಗಾಗಿದ್ದ ಚೀನಾದ ಜನತೆಯನ್ನು ಸಂಘಟಿಸಿ ಚೀನಾದಲ್ಲಿ ಕ್ರಾಂತಿಯನ್ನು ಸಾಧಿಸಿ ಇಂದಿನ ಸಂಪತ್ಸಮೃದ್ಧ ಚೀನವನ್ನು ಕಟ್ಟಿ ಬೆಳೆಸುವಲ್ಲಿ ಮಾವೋರವರ ಕೊಡುಗೆ ಅಪಾರವಾದುದು ಅದ್ವಿತೀಯವಾದುದು ಮಾರ್ಕ್ಸ್‌ವಾದದ ಮೂಲಸಿದ್ಧಾಂತಕ್ಕನುಗುಣವಾಗಿ ಚೀನಾದ ಪರಿಸ್ಥಿತಿಯನ್ನು ವಿಶ್ಲೇಷಿಸಿ ಚೀನಾದಲ್ಲಿ ಕಾರ್ಮಿಕರನ್ನು ರೈತರನ್ನು ಸಂಘಟಿಸುವುದರಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷ ಮುಖಂಡತ್ವ ಕೊಡುವುದರಲ್ಲಿ ಮಾವೋತ್ಸೆ ತುಂಗರ ಕೊಡುಗೆ ಅಪಾರವಾದುದು. ಈ ಕೊಡುಗೆ ಬಗ್ಗೆ ಮಾವೋತ್ಸೆ ತುಂಗರ ಬಗ್ಗೆ ಜಗತ್ತಿನಾದ್ಯಂತ ಕಾರ್ಮಿಕ ವರ್ಗಕ್ಕೆ ಅಭಿಮಾನ ಇದ್ದೇ ಇದೆ.

ಈ ರೀತಿ ಅವರ ಅದ್ವಿತೀಯ ಕೊಡುಗೆ ಬಗ್ಗೆ ಅವರ ಬಗ್ಗೆ ಅಭಿಮಾನ ಹೊಂದುವಾಗಲೇ ಅವರ ನೇತೃತ್ವದಲ್ಲಿ ಚೀನಾದ ಕಮ್ಯುನಿಸ್ಟ್ ಪಕ್ಷ ಇತ್ತೀಚಿನ ವರ್ಷಗಳಲ್ಲಿ ಮಾರ್ಕ್ಸ್‌ವಾದ ಲೆನಿನ್‌ವಾದದ ಪಥದಿಂದ ಸ್ವಲ್ಪ ದೂರ ಹೋಗಿದ್ದು ಇದರಿಂದ ಬಂದ ದೋಷಗಳನ್ನು ವಿಶ್ಲೇಷಿಸುವುದು ಮಾರ್ಕ್ಸ್‌ವಾದಿಗಳ ಕರ್ತವ್ಯವಾಗಿದೆ. ಭಾರತದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಈ ರೀತಿ ಚೀನಾದ ಕಮ್ಯುನಿಸ್ಟ್ ಪಕ್ಷ ಇತ್ತೀಚಿನ ವರ್ಷಗಳಲ್ಲಿ ಮಾರ್ಕ್ಸ್‌ವಾದಿ ಪಥದಿಂದ ಸ್ವಲ್ಪ ದೂರಾಗಿ ಮಾಡಿರುವ ತಪ್ಪುಗಳನ್ನು ವಿಶ್ಲೇಷಿಸಿ ಚೀನಾದ ಮುಖಂಡತ್ವದ ಈ ಕಾರ್ಯದಿಂದ ಬಂದಿರುವ ದೋಷಗಳನ್ನು ತೋರಿಸಿದೆ, 1969 ರಿಂದಲೂ ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷ ಈ ದೋಷಗಳನ್ನು ತೋರಿಸುತ್ತಾ ಬಂದಿದೆ. 1969 ರಿಂದಲೇ ಭಾರತ ಕಮ್ಯುನಿಸ್ಟ್ ಮಾರ್ಕ್ಸ್‌ವಾದಿ ಪಕ್ಷ ಎತ್ತಿ ತೋರಿಸಿದ ದೋಷಗಳನ್ನ ಚೀನಾದ ಪಕ್ಷದ ಮುಖಂಡತ್ವ ಈಗ ಅರ್ಥಮಾಡಿಕೊಂಡಿರುವುದಲ್ಲದೆ ಸ್ವವಿಮರ್ಶೆ ಮಾಡಲು ಪ್ರಾರಂಭಿಸಿದ್ದಾರೆನ್ನುವುದಕ್ಕೆ ಹುವಾರವರ ಹೇಳಿಕೆ ಸಾಕ್ಷಿಯಾಗಿದೆ, ಇದು ಮಾರ್ಕ್ಸ್‌ವಾದವನ್ನು ಪುಷ್ಟೀಕರಿಸುವುದೇ ವಿನ ಅಲ್ಲಗಳೆಯುವುದಿಲ್ಲ.

ಸೋವಿಯತ್ ಒಕ್ಕೂಟದಲ್ಲಿ ಕ್ರುಶ್ಚೇವ್, ಸ್ಟಾಲಿನ್‌ರವರ ಬಗ್ಗೆ ಮಾಡಿದ ಟೀಕೆಗಳು-ಇದಕ್ಕೆ ಸಾಮ್ರಾಜ್ಯಶಾಹಿಗಳು ಕೊಟ್ಟ ಪ್ರಚಾರ ಇವುಗಳು ಸೋವಿಯೆತ್ ಒಕ್ಕೂಟದ ಮುಖಂಡತ್ವ ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥದಿಂದ ಬೇರೆಯಾಗಿ, ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಸಿದ್ಧಾಂತವನ್ನು ಪರಿಷ್ಕರಿಸಲು ಹೊರಟಿದ್ದರಿಂದ ಬಂದ ತಪ್ಪುಗಳಾಗಿವೆ,

ಚೀನಾದ ಕ್ರಾಂತಿಗೆ ಮಾವೊತ್ಸೆ ತುಂಗ್‌ರ ಕೊಡುಗೆ ಸಂಶಯಾತೀತ. ಪ್ರಾದಲ್ಲಿ ಕ್ರಾಂತಿಯ ಸಫಲತೆಗೆ ಜೋಸೆಫ್-ಸ್ಟಾಲಿನ್‌ರವರ ಕೊಡುಗೆಯು ಮಹತ್ವಪೂರ್ಣವಾದುದು. ಸ್ಟಾಲಿನ್‌ರವರ ನೇತೃತ್ವದಲ್ಲಿ ಅವರ ಜೀವನದ ಕೊನೆಯ ಘಟ್ಟಗಳಲ್ಲಿ ತಪ್ಪುಗಳನ್ನು ಮಾಡಿದ್ದರೆ ಅದನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ಆಧಾರದಲ್ಲಿ ವಿಶ್ಲೇಷಿಸದೇ ಎಲ್ಲಾ ದೋಷಗಳಿಗೂ ಸ್ಟಾಲಿನ್‌ರವರೇ ವ್ಯಕ್ತಿಗತವಾಗಿ ಕಾರಣವೆಂಬಂತೆ ಕ್ರುಶ್ಚೇವ್‌ರವರ ನೇತೃತ್ವದಲ್ಲಿ ಸೋವಿಯೆತ್ ನಾಡಿನ ಪಕ್ಷ ವಿಶ್ಲೇಷಿಸಲು ಸೋವಿಯೆತ್ ನಾಡಿನ ಪಕ್ಷ ವಿಶ್ಲೇಷಿಸಲು ಸೋವಿಯೆತ್ ಪರಿಷ್ಕರಣವಾದಿ ಸಿದ್ಧಾಂತವೇ ಕಾರಣ. ಸೋವಿಯೆತ್ ನಾಡಿನ ಕಮ್ಯುನಿಸ್ಟ್ ಪಕ್ಷ ಯಾವ ರೀತಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಮೂಲಸಿದ್ಧಾಂತವನ್ನು ಪರಿಷ್ಕರಿಸಲು ಪ್ರಯತ್ನಿಸುತ್ತಿದೆ ಎಂದೂ ಇದರಿಂದಾಗಿ ಅವರು ಯಾವ ರೀತಿಯ ತಪ್ಪುಗಳನ್ನು ಮಾಡುತ್ತಿದ್ದಾರೆನ್ನುವುದನ್ನು ಭಾರತ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ 1964 ರಿಂದಲೇ ತೋರಿಸುತ್ತಾ ಬಂದಿದೆ.

ಸೋವಿಯೆತ್ ಒಕ್ಕೂಟದ ಪಕ್ಷದ ಪರಿಷ್ಕರಣವಾದಿ ಧೋರಣೆಯನ್ನು ಯೂರೋಪಿನ ವಿವಿಧ ದೇಶಗಳ ಪಕ್ಷಗಳು ಸ್ವೀಕರಿಸಿದವು. ಇದರಿಂದಾಗಿ ಈ ಪಕ್ಷಗಳಲ್ಲಿ ಹೆಚ್ಚಿನವುಗಳು ಒಂದಲ್ಲಒಂದು ತಪ್ಪುಗಳನ್ನೆಸಗುತ್ತಾ ಬಂದವು. ಈ ಪರಿಷ್ಕರಣವಾದಿ ಪಥದ ಪರಿಣಾಮವೇ "ಯೂರೋಕಮ್ಯುನಿಸಂ" ಸಿದ್ಧಾಂತ ಮತ್ತು ಯುಗೋಸ್ಲೊವಿಯ ಪೋಲೆಂಡ್‌ಗಳ ಲ್ಲಿನ ಘಟನೆಗಳಿಗೆ ಕಾರಣಗಳು. ಇವುಗಳ ಬಗ್ಗೆಯೂ ಈ ದೇಶಗಳ ಪಕ್ಷಗಳು ಯಾವ ರೀತಿ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಂಥದಿಂದ ದೂರವಾಗಿವೆ. ಎಂದು ಭಾರತ ಕಮ್ಯುನಿಸ್ಟ್ (ಮಾರ್ಕ್ಸ್‌ವಾದಿ) ಪಕ್ಷದ ಪೊಲಿಟ್‌ ಬ್ಯೂರೊ ಮತ್ತು ಕೇಂದ್ರ ಸಮಿತಿಯ ಗೊತ್ತುವಳಿಗಳು ಮತ್ತು ಪಕ್ಷದ ಉನ್ನತ ಮುಖಂಡರಾದ ಕಾಂ. ಇ. ಎಂ. ಎಸ್. ನಂಬೂದಿರಿಪಾದ್, ಕಾಂ ಎಂ. ಬಸವಪುನ್ನಯ್ಯ ಬಿ. ಟಿ ರಣದಿವೆ ಇವರುಗಳು ಆಗಿಂದಾಗ್ಗೆ ಬರೆದ ಲೇಖನಗಳು ವಿವರಿಸುತ್ತವೆ.

ಕೆಲವೊಂದು ಕಮ್ಯುನಿಸ್ಟ್ ಪಕ್ಷಗಳ ಮುಖಂಡತ್ವ ಈ ರೀತಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಪಥದಿಂದ ಎಡ ಮತ್ತು ಬಲಕ್ಕೆ ತಪ್ಪಿನಡೆಯುವುದರಲ್ಲಿ ಆಶ್ಚರ್ಯವೇನೂ ಇಲ್ಲ ಇದು ಹೊಸದೇನೂ ಅಲ್ಲ ಆದರೆ ಇಂದಲ್ಲ ನಾಳೆ ಅವರು ತಮ್ಮ ತಪ್ಪುಗಳನ್ನು ತಿಳಿದುಕೊಂಡು ಮಾರ್ಕ್ಸ್‌ವಾದದ ಪಥಕ್ಕೆ ಮರಳುವುದು ಅನಿವಾರ್ಯವಾಗಿರುತ್ತದೆ.

ಮಾರ್ಕ್ಸ್‌ವಾದ ಹುಟ್ಟಿದಂದಿನಿಂದಲೇ, ಹುಟ್ಟುತಲೇ ಅನ್ಯ ಸಿದ್ಧಾಂತಗಳ ವಿರುದ್ಧ ಹೋರಾಡುತ್ತಾ ಹುಟ್ಟಿದ್ದಾಗಿದೆ; ಬೆಳೆದಿದ್ದಾಗಿದೆ ಎಡ ಮತ್ತು ಬಲ ವ್ಯತಿಚಲನಗಳ (deviation) ವಿರುದ್ಧ ಹೋರಾಡುತ್ತಲೇ ಮಾರ್ಕ್ಸ್‌ವಾದ-ಲೆನಿನ್‌ವಾದ ಬೆಳೆದಿದೆ.

ಸೋವಿಯೆತ್ ಒಕ್ಕೂಟ ಮತ್ತು ಚೀನಾದ ಪಕ್ಷಗಳ ಈ ಬಲ ಮತ್ತು ಎಡ ವ್ಯತಿಚಲನಗಳಿಂದಾಗಿ ಅಂತರಾಷ್ಟ್ರೀಯ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆ ಸ್ವಲ್ಪ ಕುಂಠಿತವಾದಿದೆ ಎನ್ನುವುದು ನಿಜವಾದರೂ ಕಮ್ಯುನಿಸ್ಟ್ ಚಳುವಳಿಯ ಬೆಳವಣಿಗೆಯ ತಡೆಯಲು ಯಾರಿಗೂ ಸಾಧ್ಯವಿಲ್ಲವೆನ್ನುವುದೂ ವಾಸ್ತವವಾಗಿದೆ. ವಿಯೆತ್ನಾಮಿನಲ್ಲಿ ಹೊ. ಚಿ. ಮಿನ್ಹರ ನೇತೃತ್ವದಲ್ಲಿ ಕಮ್ಯುನಿಸ್ಟ್ ಪಕ್ಷ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ಪಥದಲ್ಲಿ ಜನತೆಯನ್ನು ಸಂಘಟಿಸಿದ್ದರಿಂದ ಅಮೇರಿಕನ್ ಸಾಮ್ರಾಜ್ಯಶಾಹಿಗಳ ವಿರುದ್ಧ "ನಭೂತೋನ ಭವಿಷ್ಯ" ಎಂಬಂತೆ ಧೀರೋದಾತ್ತ ಹೋರಾಟ ನಡೆಸಿ ಗಳಿಸಿದ ಜಯ ಮಾರ್ಕ್ಸ್‌ವಾದ-ಲೆನಿನ್‌ವಾದಕ್ಕೆ ಸಿಕ್ಕಿದ ಜಯವಾಗಿದೆ. ಇದೇ ರೀತಿ ಆಫ್ರಿಕ-ಲ್ಯಾಟಿನ್ ಅಮೇರಿಕಗಳಲ್ಲೂ ಯೂರೋಪಿನಲ್ಲೂ ಕಮ್ಯುನಿಸ್ಟ್ ಚಳುವಳಿ ನಡೆಯುತ್ತಿದೆ.

ಹೊ. ವೆ. ಶೇಷಾದ್ರಿಯವರು ರಷ್ಯಾದಲ್ಲಿ ಗುಲಾಮಗಿರಿ ಇದೆಯೆಂದು ಭಾರತ ಸ್ವಾತಂತ್ರ್ಯ ದೇಶವೆಂದು ವಿವರಿಸುತ್ತಾರೆ. ಶೇಷಾದ್ರಿಯವರು ಈ ಮೂಲಕ ತಾನು ಯಾವ ವರ್ಗವನ್ನು ಪ್ರತಿನಿಧಿಸುತ್ತಿದ್ದೇವೆಂದು ಸ್ವತಃ ವ್ಯಕ್ತಪಡಿಸಿದ್ದಾರೆ. ಭಾರತ ಸ್ವಾತಂತ್ರ್ಯವಾಗಿದೆ ಯಾರಿಗೆ? ಕಾಳಸಂತೆ ವ್ಯಾಪಾರಿಗಳಿಗೆ-ದೊಡ್ಡ ಬಂಡವಾಳಶಾಹಿಗಳಿಗೆ-ಭೂಮಾಲೀಕರುಗಳಿಗೆ.

ಬಡತನದ ರೇಖೆಯ ಕೆಳಗಿದ್ದು ಸದಾ ಶೋಷಣೆಗೊಳಗಾಗಿರುವ ರೈತ ಕಾರ್ಮಿಕರು, ದುಡಿಯುವ ಜನವಿಭಾಗದ ಮೇಲೆ ನಿರಂತರ ಶೋಷಣೆಯಾಗುತ್ತಿರುವಾಗ ಸ್ವಾತಂತ್ರ್ಯಕ್ಕೆ ಇಲ್ಲಿ ಏನು ಅರ್ಥವಿದೆ? ತಮ್ಮ ಮೇಲಾಗುತ್ತಿರುವ ಶೋಷಣೆಯ ವಿರುದ್ಧ ಸಂಘಟಿತರಾಗಲು ಹೊರಟರೆ ಆಳುವ ವರ್ಗಗಳು ಸರಕಾರದ ಮೇಲಿರುವ ತಮ್ಮ ಹಿಡಿತವನ್ನು ಉಪಯೋಗಿಸಿ ಎಂತಹ ಕ್ರೂರ ದಬ್ಬಾಳಿಕೆ ನಡೆಸುತ್ತಿದ್ದಾರೆನ್ನುವುದು ನಮ್ಮೆದುರು ಕಾಣುವ ನಿತ್ಯ ಸಂಭವಗಳಾಗಿವೆ ಕಿಲ್ವೆನ್ಮಣಿಯಲ್ಲಿ ಕೂಲಿ ಹೆಚ್ಚು ಕೇಳಿದ ಹರಿಜನ ಕೂಲಿಗಾರರ ಮನೆಗಳನ್ನು ಮೇಲ್ಜಾತಿಗೆ ಸೇರಿದ ಭೂಮಾಲಕರು ಬೆಂಕಿ ಇಟ್ಟು ಸುಟ್ಟರು, ಆದರೆ ಭೂಮಾಲಕರಿಗೇನಾಯಿತು? ಕೋಲಾರ ಜಿಲ್ಲೆಯಲ್ಲಿ ಹುಣಸೆಕೋಟೆ ಕೃಷ್ಣೇಗೌಡನೆಂಬ ಭೂಮಾಲಕ ದಲಿತನೊಬ್ಬನನ್ನು ಹಾಡುಹಗಲಿನಲ್ಲೇ ಕೊಂದ ಅವನಿಗೆ ಸರಕಾರ ಅಭಯವನ್ನು ನೀಡಿದ್ದಲ್ಲದೆ, ಅವನಿಗೆ ಈ ಸರಕಾರ ನೀಡಿದ ಶಿಕ್ಷೆಯಾದರೂ ಏನು? ಪ್ರತಿಭಟಿಸಲು ಹೋದ ದಲಿತ ಸಂಘರ್ಷ ಸಮಿತಿಯವರಿಗೆ ಪೋಲೀಸರಿಂದ ಲಾಠಿಏಟು, ಬೂಟಿನೇಟು, ಒದೆತ ಸಿಕ್ಕಿತು. ಇಂತಹ ಸಹಸ್ರ ಸಹಸ್ರ ಘಟನೆಗಳು ದಿನನಿತ್ಯವೂ ದೇಶದಾದ್ಯಂತ ನಡೆಯುತ್ತಿವೆ. ಇಲ್ಲಿ ಸ್ವಾತಂತ್ರ್ಯವೆಂಬುವುದು ಶೋಷಿತರಿಗಲ್ಲವೇ ದುಡಿಯುವ ವರ್ಗಕ್ಕಲ್ಲ.

ಪ್ರೊ. ಹಿರೇನ್ ಮುಖರ್ಜಿಯವರು ಶಂಕರಾಚಾರ್ಯರನ್ನು ಅಧ್ಯಯನ ಮಾಡುವುದು ಹೊ. ವೆ. ಶೇಷಾದ್ರಿಯವರಿಗೆ ಸೋಜಿಗವೆನಿಸಿದೆ ಮಾರ್ಕ್ಸ್‌ವಾದದ ತಿಳುವಳಿಕೆ ಏನೇನೂ ಇಲ್ಲದಿರುವುದರಿಂದಲೇ ಶೇಷಾದ್ರಿಯವರಿಗೆ ಸೋಜಿಗಕ್ಕೆ ಕಾರಣ. ಚರಿತ್ರೆಯ ಒಂದೊಂದು ಹಂತದಲ್ಲೂ ಪುರೋಗಮನಕ್ಕೆ ಕೊಡುಗೆಯಿತ್ತವರನ್ನು ಮಾರ್ಕ್ಸ್‌ವಾದಿಗಳು ಎಂದೂ ಸ್ಮರಿಸುತ್ತಾರೆ ಚರಿತ್ರೆಯನ್ನು ವಿಮರ್ಶಾತ್ಮಕವಾಗಿ ವಸ್ತುನಿಷ್ಟವಾಗಿ ವಿಶ್ಲೇಷಿಸಿ ಪುರೋಗಾಮಿ ಅಂಶಗಳನ್ನು ಸ್ವೀಕರಿಸುತ್ತಾರೆ. ಪ್ರತಿಗಾಮಿ ಅಂಶಗಳನ್ನು ತಿರಸ್ಕರಿಸುತ್ತಾರೆ. ಈ ದೃಷ್ಟಿಯಿಂದ ಶಂಕರಾಚಾರ್ಯರನ್ನಷ್ಟೇ ಅಲ್ಲ ಭಾರತದ ಸಮಗ್ರ ಚರಿತ್ರೆಯನ್ನು ಮಾರ್ಕ್ಸ್‌ವಾದಿಗಳು ಅಧ್ಯಯನ ಮಾಡುತ್ತಾರೆ ಚರಿತ್ರೆಯ ಪುರೋಗತಿಗೆ ಪುರೋಗಾಮಿ ಅಂಶಗಳನ್ನೇ ಸ್ವೀಕರಿಸಿ ತಮ್ಮದನ್ನಾಗಿಸಿಕೊಳ್ಳಲು ಯತ್ನಿಸುತ್ತಾರೆ. ಆದ್ದರಿಂದಲೇ ಬುದ್ಧ, ಬಸವೇಶ್ವರ, ರಾಜಾರಾಮ್ ಮೋಹನ ರಾಯ್, ಮೊದಲಾದವರ ಬಗ್ಗೆ ಕಮ್ಯುನಿಸ್ಟರಿಗೆ ಅಭಿಮಾನವಿದೆ.

●

ದಕ್ಷಿಣ ವಲಯ ವಿಮಾ ನೌಕರರ ಅಧಿವೇಶನ

ದಕ್ಷಿಣ ವಲಯ ವಿಮಾನೌಕರರ ಫೆಡರೇಶನ್ನಿನ 16ನೇ ಅಧಿವೇಶನವು ಹೈದರಾಬಾದಿನಲ್ಲಿ ತಾ 10-11-80 ರಿಂದ12-11-80ರವರೆಗೆ ನಡೆಯಿತು ಅಧಿವೇಶನವು ಜೀವವಿಮಾ ನೌಕರರ ಬೋನಸ್ ಬಗ್ಗೆ ಸುಪ್ರೀಂಕೋರ್ಟಿನಲ್ಲಿ ಜಯಗಳಿಸಿದ ಸುದ್ದಿಯೊಂದಿಗೆ ಪ್ರಾರಂಭವಾಗಿ, ಗೆದ್ದ ಬೋನಸನ್ನು ನೀಡಲಿಚ್ಛಿಸದ ಸರ್ಕಾರ ಮತ್ತು ಎಲ್ ಐ ಸಿ. ಅಧಿಕಾರ ವರ್ಗದ ಸಂಚಿನ ವಿರುದ್ಧ ಹೋರಾಟದ ಕಹಳೆಯೊಂದಿಗೆ ಮುಕ್ತಾಯವಾಯಿತು.

ಅಧಿವೇಶನದಲ್ಲಿ ಕಾಂ. ಸುನಿಲ್ ಮೈತ್ರ M.P. ಮತ್ತು ಕಾಂ. ಸರೋಜ ಚೌಧುರಿ ಅಖಿಲ ಭಾರತ ವಿಮಾನೌಕರರ ಸಂಘದ ಪ್ರಧಾನ ಕಾರ್ಯದರ್ಶಿಯವರು ಪಾಲ್ಗೊಂಡಿದ್ದರು. ಕಾಂ. ಸುನಿಲ್ ಮೈತ್ರರವರು ಸುಪ್ರೀಂಕೋರ್ಟಿನ ತೀರ್ಪಿನ ವಿರುದ್ಧ ಸರಕಾರ ಕೈ ಹಾಕಿದರೆ ಜೀವವಿಮಾ ನಿಗಮದಲ್ಲಿ ಸಂಪೂರ್ಣ ಅಶಾಂತಿಯುಂಟಾಗುತ್ತದೆಂದು ಸರ್ಕಾರಕ್ಕೆ ಎಚ್ಚರಿಸಿದರು.

●

ಐಕ್ಯರಂಗಕ್ಕೆ

ಚಂದಾದಾರರಾಗಿರಿ

ಆರನೇ ಯೋಜನೆಯ ಬಗ್ಗೆ ಪ. ಬಂಗಾಳ ಸರ್ಕಾರದ ಟಿಪ್ಪಣಿಗಳು

ನವೆಂಬರ್ ೫ ರಂದು ಯೋಜನಾ ಆಯೋಗವನ್ನು ಪ. ಬಂಗಾಳ ಮುಖ್ಯಮಂತ್ರಿ ಜ್ಯೋತಿಬಸು ಮತ್ತು ಅರ್ಥಮಂತ್ರಿ ಅಶೋಕ ಮಿತ್ರ ಅವರು ಭೇಟಿಮಾಡಿ ಚರ್ಚೆಗಾಗಿ ಕೆಲವು ಟಿಪ್ಪಣಿಗಳನ್ನು ಮಂಡಿಸಿದರು.

1. "1080-85ರ ಆರನೇ ಪಂಚವಾರ್ಷಿಕ ಯೋಜನೆ-ಒಂದು ಚೌಕಟ್ಟು" ಎಂಬ ಯೋಜನಾ ಆಯೋಗದ ದಾಖಲೆಯ ಬಗ್ಗೆ ಪ.ಬಂಗಾಳದ ಕೆಲವು ಅನಿಸಿಕೆಗಳನ್ನು ಆಗಸ್ಟ್ 30 31,1980ರಂದು ಸೇರಿದ್ದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯ ಸಭೆಯಲ್ಲಿಯೇ ಮುಖ್ಯಮಂತ್ರಿಯವರು ವ್ಯಕ್ತಪಡಿಸಿದ್ದಾರೆ. ನವೆಂಬರ್ 5ರ ಚರ್ಚೆಗೆ ಈ ಕೆಳಕಂಡ ವಿಷಯಗಳನ್ನು ಮುಂದಿಡಲಾಗುತ್ತಿದೆ.

2. ದೇಶದ ಆರ್ಥಿಕ ಯೋಜನೆಯ ವೈಫಲ್ಯಕ್ಕೆ ಮುಖ್ಯಕಾರಣ, ಸ್ಥಳೀಯ ಮಾರುಕಟ್ಟೆಯಲ್ಲಿ ಕೊಳ್ಳುವ ಶಕ್ತಿಗೆ ಒಂದು ಸಮರ್ಥವಾದ ತಳಹದಿಯನ್ನು ನಿರ್ಮಿಸದಿರುವುದೇ ಆಗಿದೆ. ಹೀಗೆ ಮಾಡಿದ್ದಿದ್ದರೆ ಕೃಷಿ ಮತ್ತು ಕೈಗಾರಿಕಾ ವಲಯಗಳಲ್ಲಿ ಬೆಳವಣಿಗೆಯು ಒಂದು ಶೀಘ್ರಗತಿಯನ್ನು ಅನುಸರಿಸಿರುತ್ತಿತ್ತು. ಈಗಿರುವ ಊಳಿಗಮಾನ್ಯ ಬಂಡವಾಳಶಾಹಿ ರಚನೆಯು ಅಲುಗಾಡದೆ ಇರುವವರೆಗೂ ಬೆಳವಣಿಗೆಯ ಉನ್ನತ ಗುರಿಗಳು ಕನಸಾಗಿಯೇ ಉಳಿಯುತ್ತವೆ. ಈ ಪರಿಸ್ಥಿತಿಯಲ್ಲಿ ದೇಶದ ಬಹುಸಂಖ್ಯಾತರಾದ ಬಡವರ ಬದುಕನ್ನು ಸಹನೀಯವಾಗಿಸುವ ನಿಯಂತ್ರಣ ಕ್ರಮಗಳಿಗೆ ಗಮನ ಕೊಡಬೇಕು.

ಸಾರ್ವಜನಿಕ ವಿತರಣೆ:

3. ಅಂಥ ಒಂದು ಮುಖ್ಯವಾದ ಕ್ರಮ ಎಂದರೆ ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿಸುವುದು. ಜನತೆಯ ಕಲ್ಯಾಣಕ್ಕೆ ಮತ್ತು ಉನ್ನತ ಆರ್ಥಿಕ ಬೆಳವಣಿಗೆಯ ಮಟ್ಟವನ್ನು ಮುಟ್ಟುವುದಕ್ಕೆ ಅಗತ್ಯವಸ್ತುಗಳು, ಕಚ್ಚಾ ವಸ್ತುಗಳು ಮುಂತಾದವುಗಳ ಸಗಟು ವ್ಯಾಪಾರವನ್ನು ಸರಕಾರವೇ ವಹಿಸಿಕೊಳ್ಳುವುದು ಅತ್ಯಂತ ಮುಖ್ಯವಾದದ್ದು. ದೇಶದಾದ್ಯಂತ ಒಂದೇ ಬೆಲೆಯಲ್ಲಿ ಮಾರುವ ಸಲುವಾಗಿ ಸುಮಾರು ಒಂದು ಡಜನ್ ಅಗತ್ಯ ವಸ್ತುಗಳ ಸಾರ್ವಜನಿಕ ಸಂಗ್ರಹ ಮತ್ತು ವಿತರಣಾ ವ್ಯವಸ್ಥೆಗೆ ರಾಷ್ಟ್ರೀಯ ಯೋಜನೆಯನ್ನು ಕೂಡಲೇ ಕೈಗೊಳ್ಳಬೇಕೆಂದು ಪ.ಬಂಗಾಳ ಸರಕಾರ ಬಹಳ ಹಿಂದಿನಿಂದಲೂ ಒತ್ತಾಯಿಸುತ್ತಿದೆ. ಅಗತ್ಯ ವಸ್ತುಗಳು ಮತ್ತು ಇನ್ನಿತರ ಕೆಲವು ವಸ್ತುಗಳ ಬೆಲೆಯನ್ನು ಈ ಮೂಲಕ ಇಳಿಸಿದರೆ, ಹಣದುಬ್ಬರದ ವಿಷವರ್ತುಲವನ್ನು ಮುರಿಯಬಹುದು. ಇದರಿಂದ ಬಡವರಿಗೆ ಬಹಳ ಲಾಭವಾಗುತ್ತದೆ. ಈ ಕೆಲಸ ಮಾಡಲು, ಲಾಭಕೋರರು, ಕಾಳಸಂತೆಕೋರರು ಮುಂತಾದವರ ವಿರುದ್ಧ ದೃಢ ಕ್ರಮ ಕೈಗೊಳ್ಳಬೇಕು, ಸಬ್ಸಿಡಿ ಕ್ರಮವನ್ನು ಪರಿಷ್ಕರಿಸಬೇಕು, ಉತ್ಪಾದಕರಿಗೆ ಒಳ್ಳೆಯ ಬೆಲೆ ಕೊಡಬೇಕು.

ಭೂಸುಧಾರಣೆಗಳು :

4. ಕೃಷಿರಂಗದಲ್ಲಿ ಈ ಮುಖ್ಯವಾಗಿರುವ ವಿಷಯ ಎಂದರೆ ಭೂಸುಧಾರಣೆಯದು. ಸ್ವಾತಂತ್ರ್ಯ ಬಂದ ಮೇಲೆ 400 ಮಿಲಿಯನ್ ಭೂಮಿಯಲ್ಲಿ 4 ಮಿಲಿಯನ್ ಕೂಡ ಸರ್ಕಾರದ ಹೆಚ್ಚುವರಿ ವಿತರಣೆಯಾಗಿಲ್ಲ. ಯೋಜನಾ ಆಯೋಗದ, ತಾನು ಹೇಳುವುದನ್ನು ಮಾಡಲೂ ಇಷ್ಟಪಟ್ಟರೆ ಅದು ರಾಜಕೀಯ ಮನಸ್ಸು ಮಾಡಿದ ಹೊರತು ಭೂಸುಧಾರಣೆ ಸಾಧ್ಯವಿಲ್ಲ. ಭೂಸುಧಾರಣೆಯಿಂದ ಶೋಷಿತ ರೈತರು ಹೆಚ್ಚು ಪ್ರಯತ್ನ ಕೈಗೊಳ್ಳುತ್ತಾರೆ. ಅವರಿಗೆ ರಾಸಾಯನಿಕ ಮುಂತಾದುವಕ್ಕೆ ಸಹಾಯ ಮಾಡಿದರೆ ಒಟ್ಟು ಉತ್ಪನ್ನ ಖಂಡಿತ ಹೆಚ್ಚುತ್ತದೆ.

5. ಆದ್ದರಿಂದ ಭೂಸುಧಾರಣೆ ಮತ್ತು ಭೂಹಂಚಿಕೆಯ ಬಗ್ಗೆ ಯೋಜನಾ ಆಯೋಗವು ಖಚಿತಗುರಿಗಳನ್ನು ರೂಪಿಸಿಕೊಳ್ಳಬೇಕು. ಗುರಿಯನ್ನು ವರ್ಷಕ್ಕೆ ಇಷ್ಟು ಎಂದು ವಿಭಾಗಿಸಿಕೊಂಡು ಕೇಂದ್ರ ಸರಕಾರ ಮತ್ತು ರಾಜ್ಯಸರಕಾರಗಳ ಜೊತೆ ಮಾತನಾಡಿ ಆಡಳಿತ ಮತ್ತು ಶಾಸನ ಕ್ರಮಗಳನ್ನು ಕೈಗೊಂಡು ಪ್ರತಿವರ್ಷವೂ ಈ ಗುರಿಗಳನ್ನು ಮುಟ್ಟಲು ಪ್ರಯತ್ನಿಸಬೇಕು, ಬೀಜಗಳು, ರಾಸಾಯನಿಕ ಮತ್ತು ನೀರಿನ ವಿತರಣೆಗೂ ಗುರಿಗಳನ್ನು ಇಟ್ಟುಕೊಳ್ಳಬೇಕು. ಈ ವಿತರಣೆಯು ಹಿಡುವಳಿ ಆಧಾರಿತ ವಿಶಾಲ ವ್ಯವಸ್ಥೆಯನ್ನು ಪ್ರತಿರಾಜ್ಯಕ್ಕೂ ರೂಪಿಸಬೇಕು.

6. ರಾಸಾಯನಿಕ, ನೀರು, ಬೀಜಗಳು, ಕೀಟನಾಶಕಗಳು ಮುಂತಾದುವುಗಳ ವಿತರಣೆ ಈಗ ತುಂಬ ಅಸಮರ್ಪಕವಾಗಿದೆ. ಇದನ್ನು ಸರಿಪಡಿಸಬೇಕು. ತೈಲ ಆಧಾರಿತ ರಾಸಾಯನಿಕಗಳ ಬೆಲೆ ಮುಂದೆ ಇನ್ನಷ್ಟು ಹೆಚ್ಚುವ ನಿರೀಕ್ಷೆಯಿದೆ. ಆದ್ದರಿಂದ ನಮ್ಮ ವಿಜ್ಞಾನಿಗಳು ಈಗಾಗಲೇ ತಿಳಿದಿರುವ ಪರ್ಯಾಯ ಕ್ರಮಗಳನ್ನು ರೈತಜನಾಂಗಕ್ಕೆ ಮನವರಿಕೆ ಮಾಡಿಕೊಡಲು ಜಮೀನಿನಲ್ಲಿ ಪರಿಚಯಿಸಬೇಕು.

7. ಈ ಮಧ್ಯೆ ಈಗ ಸಿಗುತ್ತಿರುವ ರಾಸಾಯನಿಕಗಳು ಬೀಜಗಳು ಮುಂತಾದುವುಗಳ ಹಂಚಿಕೆ ಇನ್ನಷ್ಟು ವಿಶಾಲವಾಗಬೇಕು ಕಡಿಮೆ ಬೆಲೆಯ ಗೊಬ್ಬರದ ಪರಿಚಯ ಹೆಚ್ಚಬೇಕು. ಇದರಿಂದ ರಾಷ್ಟ್ರೀಯ ಉತ್ಪನ್ನ ಹೆಚ್ಚುತ್ತದಲ್ಲದೆ, ಆದಾಯ ವಿತರಣೆಯೂ ಸುಧಾರಿಸುತ್ತದೆ, ಆಗ ರಸಗೊಬ್ಬರದ ಬೇಡಿಕೆ ಅಷ್ಟೊಂದು ಹೆಚ್ಚಾಗುವುದಿಲ್ಲ. ಯೋಜನಾ ಆಯೋಗ ಸಲಹೆ ಮಾಡಿದ ಹಾಗೆ, ರಸಗೊಬ್ಬರಗಳ ಭಾರಿ ಆಮದು ಬೇಕಾಗುವುದಿಲ್ಲ

ಸಾಲ ಸೌಲಭ್ಯಗಳು :

8. ಸಾಲದ ವ್ಯವಸ್ಥೆ ಬಗ್ಗೆಯೂ ಗಮನಹರಿಸಬೇಕಾಗಿದೆ. ಈಗ ನಮಗೆ ಕಳೆದ ದಶಕದ ಅನುಭವ ಇದೆ, ಬಡವರಿಗೆ ಮತ್ತು ಅಗತ್ಯವಿರುವ ಸಾಲನೀಡಿಕೆಯ ಯೋಜನೆಯನ್ನು ಬ್ಯಾಂಕುಗಳು ಹದಗೆಡಿಸಿವೆ. ರಾಷ್ಟ್ರೀಕರಣ ಆದರೂ ಸಹ ಹೀಗೆ ಮಾಡಿವೆ. ಬಡವರಿಗಾಗಿ ಗುಡಿಕೈಗಾರಿಕೆಗಳನ್ನು ಬೆಳೆಸುವ ಯೋಜನೆಗೂ ಇದೇ ಗತಿ ಒದಗಿದೆ, ಬ್ಯಾಂಕುಗಳ ಮೇಲೆ ರಾಜ್ಯ ಸರ್ಕಾರಗಳಿಗೆ ಅಧಿಕಾರವಿಲ್ಲದಿರುವುದರಿಂದ ಬಡ ಮತ್ತು ಅಗತ್ಯವಿರುವ ಜನರಿಗೆ ಸಹಾಯ ಕೊಡುವುದರಲ್ಲಿ ತಪ್ಪವಾಗುತ್ತದೆ. ಆದ್ದರಿಂದ ಬ್ಯಾಂಕಿಂಗ್ ವ್ಯವಸ್ಥೆಯ ನಿಯಂತ್ರಣದ ಕ್ರಮಗಳು ಬದಲಾಗಬೇಕಾಗಿದೆ.

ಕೈಗಾರಿಕಾ ವಿಸ್ತರಣೆ :

9. ಸ್ವದೇಶಿ ಮತ್ತು ವಿದೇಶಿ ಏಕಸ್ವಾಮ್ಯ ಸಂಸ್ಥೆಗಳ ದೊಡ್ಡ ಘಟಕಗಳನ್ನು ವಿಸ್ತರಿಸುವುದಕ್ಕೆ ತಕ್ಷಣ ಅನುಮತಿ ನೀಡುವುದರಿಂದ, ಸಣ್ಣ ಘಟಕಗಳು ವಿಸ್ತರಿಸುವುದಕ್ಕೆ ಪ್ರೋತ್ಸಾಹ ನೀಡಲಾಗುವುದು ಎಂಬ ಘೋಷಣೆಗೆ ಧಕ್ಕೆಯುಂಟಾಗುತ್ತದೆ. ತುಂಬ ವೈಭವಯುತವಾದ ಉತ್ಪಾದನಾ ಕ್ರಮಗಳಿಂದ ಆಮದಿಗೆ ತುಂಬಾ ಬೇಡಿಕೆ ಹೆಚ್ಚುತ್ತದೆ. ಭಾರಿಪ್ರಮಾಣದ ಕೈಗಾರಿಕೆಗಳ ವಿಸ್ತರಣ ಅಗತ್ಯವಾದುದೇನೋ ಸರಿಯೆ. ಆದರೆ ಅದು ಮೂಲಭೂತ ಕೈಗಾರಿಕೆಗಳು ಮತ್ತು ಒಳ ಸೌಲಭ್ಯಗಳ ವಿಸ್ತರಣೆಗೆ ಮಾತ್ರ ಸೀಮಿತವಾಗಿರಬೇಕು ಮತ್ತು ಇದು ಸಾಧ್ಯವಾದಷ್ಟು ಸಾರ್ವಜನಿಕ ವಲಯದೊಳಗೇ ನಡೆಯಬೇಕು.

10. ರಫ್ತುಗಳನ್ನು ಪ್ರೋತ್ಸಾಹಿಸುವುದಕ್ಕಾಗಿ ಯೋಜನಾ ಆಯೋಗವು ಸಬ್ಸಿಡಿಗಳನ್ನು ನೀಡಲು ಸಲಹೆ ಮಾಡಿದೆ. ಇಂಥ ಸಬ್ಸಿಡಿಗಳ ಲಾಭವು, ಈ ಹಿಂದಿನ ಅನುಭವ ತೋರಿಸಿರುವಂತೆ, ಪ್ರಭಾವ ಪಡೆದವರಿಗೆ ಮತ್ತು ಶ್ರೀಮಂತರಿಗೆ ದಕ್ಕುತ್ತದೆ. ಇದರ ಬದಲು ಸಣ್ಣ ಘಟಕಗಳಿಗೆ ಪ್ರೋತ್ಸಾಹ ಮತ್ತು ಔಚಿತ್ಯವುಳ್ಳ ತಾಂತ್ರಿಕ ಜ್ಞಾನ ಇವುಗಳನ್ನು ಒದಗಿಸಿದರೆ, ಆಮದು ರಫ್ತು ಮಟ್ಟ ಏರಿಕೆಯಾಗಿ, ಆಂತರಿಕ ಚಟುವಟಿಕೆ ಹೆಚ್ಚುತ್ತದೆ.

ಸಂಪನ್ಮೂಲಗಳ ಸಂಗ್ರಹ :

11 ಸಂಪನ್ಮೂಲಗಳನ್ನು ಸಂಗ್ರಹಿಸುವ ವಿಚಾರದಲ್ಲಿ ಹೇಳುವುದಾದರೆ, ನೇರ ತೆರಿಗೆಗಳನ್ನು ಹಾಕಲು ಒಪ್ಪದೆ, ಅಪರೋಕ್ಷ ತೆರಿಗೆಗಳ ಭಾರವನ್ನು ವಿಪರೀತ ಹೆಚ್ಚಿಸಿರುವುದರಿಂದ ಆದಾಯ ವಿತರಣೆಯಲ್ಲಿ ಬಹಳ ಅಸಮಾನತೆ ಇದೆ. ಇದರಿಂದ ಹಣದುಬ್ಬರ ಇನ್ನಷ್ಟು ಹೆಚ್ಚಿ ಬಡವರಿಗೆ ಏಟಾಗಿದೆ, ಆದ್ದರಿಂದ ತೆರಿಗೆ ವ್ಯವಸ್ಥೆಯನ್ನು ವಿಶಾಲವಾಗಿ ಪುನರ್ ಪರಿಶೀಲಿಸಬೇಕಾಗಿದೆ. ಇನ್ನೊಂದು ವಿಷಾದನೀಯ ಪ್ರವೃತ್ತಿ ಎಂದರೆ, ಕೇಂದ್ರವು ರಾಜ್ಯ ಸರ್ಕಾರಗಳ ಹಣಕಾಸಿನ ಅಧಿಕಾರವನ್ನು ಮತ್ತಷ್ಟು ಕಿತ್ತುಕೊಳ್ಳಲು ಯತ್ನಿಸಿರುವುದು. ಸರ್ಕಾರದ ಈ ಧೋರಣೆಯನ್ನು ಬಿಡದಿದ್ದರೆ ಯೋಜನೆಗಾಗಿ ಸಂಪನ್ಮೂಲಗಳನ್ನು ಸಂಗ್ರಹಿಸುವ ರಾಜ್ಯಗಳ ಸಾಮರ್ಥ್ಯವು ತೀವ್ರವಾಗಿ ಕುಗ್ಗುತ್ತದೆ.

ನ್ಯಾಯವಾದ ವೇತನಗಳು :

12 ಸಾಮಾನ್ಯ ಜನತೆಯ ಜೀವನವನ್ನು ಸುಧಾರಿಸಬೇಕಾದರೆ ಬೆಲೆಗಳನ್ನು ಹತೋಟಿಗೆ ತರಬೇಕು ಮತ್ತು ಅವರು ವೇತನಗಳನ್ನೂ ಸುಧಾರಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ರೈತಘಟಕಗಳೊಂದಿಗೆ ಸೇರಿಕೊಂಡು ಸರ್ಕಾರದ ಏಜೆನ್ಸಿಗಳು, ದುಡಿಮೆಗಾರರಿಗೆ ನ್ಯಾಯವಾದ ವೇತನಗಳು ಸಿಗುವಂತೆ ಮಾಡಬೇಕು.

13 ಇದರ ಜೊತೆಗೆ, ಗ್ರಾಮೀಣ ಅಗತ್ಯಗಳನ್ನು ಪೂರೈಸುವ ಸಾರ್ವಜನಿಕ ಕಾಮಗಾರಿ ಕಾರ್ಯಕ್ರಮಗಳನ್ನೂ ಸರ್ಕಾರ ಕೈಗೊಳ್ಳಬೇಕು. ದುಡಿಮೆಗಾಗಿ ಧಾನ್ಯ ಮುಂತಾದ ಯೋಜನೆಗಳು ಬಡವರಿಗೆ ಸ್ವಲ್ಪ ಪರಿಹಾರ ಕೊಟ್ಟಿವೆ. ಇಂಥ ಯೋಜನೆಗಳನ್ನು ವಿಸ್ತರಿಸಬೇಕು.

ಉದ್ಯೋಗ ಕಾರ್ಯಕ್ರಮ :

14 ಈ ವಿಚಾರದಲ್ಲಿ ಒಂದು ಮಾತನ್ನು ಅಗತ್ಯವಾಗಿ ಹೇಳಬೇಕು. ಈ ವರ್ಷದಿಂದ, ದುಡಿಮೆಗಾಗಿ ಧಾನ್ಯ ಕಾರ್ಯಕ್ರಮವನ್ನು ಒಂದು ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮವನ್ನಾಗಿ ಪರಿವರ್ತಿಸಿ, ಪಂಚವಾರ್ಷಿಕ ಯೋಜನೆಯ ಒಳಗೆ ಅದನ್ನು ಸೇರಿಸಲಾಗುತ್ತದೆ. ಈ ಕಾರ್ಯಕ್ರಮದ ಅನ್ವಯ ರಾಜ್ಯಗಳಿಗೆ ವಿತರಣೆ ಮಾಡುವ ದವಸಧಾನ್ಯಗಳು ರಾಷ್ಟ್ರೀಯ ಸಂಪನ್ಮೂಲಗಳಿಗೆ ಸೇರಿರುವುವು. ಸಂಪನ್ಮೂಲಗಳ ವಿತರಣೆಯನ್ನು ನಿರ್ಧರಿಸುವುದು ಯೋಜನಾ ಆಯೋಗವೇ ಆಗಿರುವುದರಿಂದ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಕಾರ್ಯಕ್ರಮದ ವಿತರಣೆಯನ್ನೂ ಆಯೋಗವೇ ಹೊರತು ಗ್ರಾಮೀಣ ಪುನರ್ರಚನೆಯ ಸಚಿವಾಲಯವಲ್ಲ.

ಟ್ರೇಡ್ ಯೂನಿಯನ್ ಹಕ್ಕುಗಳು :

15 ಕೈಗಾರಿಕಾ ವಲಯದಲ್ಲಿ ಸಂಘಟಿತ ಟ್ರೇಡ್ ಯೂನಿಯನ್ ಚಳುವಳಿಯು ಕಾರ್ಮಿಕನ ನಿಜವೇತನದಲ್ಲಿ ಕಡಿತ ಉಂಟಾದಾಗ ಯಶಸ್ವಿ ಹೋರಾಟಗಳನ್ನು ನಡೆಸಬಲ್ಲುದು. ಆದ್ದರಿಂದ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಸರ್ಕಾರ ದಮನ ಮಾಡಬಾರದು.

ಶಿಕ್ಷಣ ವಲಯ :

16. 14 ವರ್ಷಕ್ಕಿಂತ ಕೆಳಗಿನ ಮಗುವಿಗೆ ಶಿಕ್ಷಣವಿರಲೇಬೇಕೆಂಬ ಮಾರ್ಗದರ್ಶಕ ಸೂತ್ರವನ್ನು ಹೇಳಿಬಿಟ್ಟರೆ ಮಾತ್ರ ಸಾಲದು. ಇದಕ್ಕೆ ಎಷ್ಟು ಬಂಡವಾಳ ಹೂಡಿಕೆ ಬೇಕು, ಇದನ್ನು ವಿನಿಯೋಗಿಸುವುದು ಹೇಗೆ ವಾರ್ಷಿಕ ಗುರಿಗಳು ಏನು ಮುಂತಾದುವನ್ನೂ ವಿಶ್ಲೇಷಿಸಿ ತಯಾರಿ ನಡೆಸಬೇಕು.

ಅಗಾಧ ಅಂತರಗಳು :

17 ಪ್ರಾದೇಶಿಕ ಅಭಿವೃದ್ಧಿಯಲ್ಲಿ ಅಗಾಧ ಅಂತರಗಳು ಇವೆ ಅನೇಕ ಕಡೆಗಳ ಆರ್ಥಿಕ ಅಭಿವೃದ್ಧಿ ತೀರ ಕೆಳಮಟ್ಟದಲ್ಲಿದೆ. ಮಿಕ್ಕ ಭಾಗಗಳಲ್ಲಿ ತೀರ ಇಲ್ಲವೇ ಇಲ್ಲ. ಈಗಿರುವ ಅಸಮಾನತೆಗಳನ್ನು ಸರ್ಕಾರ ಪುನರ್ ಪರಿಶೀಲಿಸಬೇಕಾಗಿದೆ.

18. ಆರ್ಥಿಕ ಅಭಿವೃದ್ಧಿ ಮತ್ತು ಉದ್ಯೋಗದ ವಿಸ್ತರಣೆಗಳು ಅನೇಕ ರಾಜ್ಯಗಳಲ್ಲಿ ತೀರ ಪರಿಣಾಮರಹಿತವಾಗಿವೆ. ಹಿಂದುಳಿದ ಈ ಭಾಗಗಳ ಬೆಳವಣಿಗೆಗೆ ಪಂಚವಾರ್ಷಿಕ ಯೋಜನೆಗಳಲ್ಲಿ ಒಂದು ಸಮಗ್ರ ಕಾರ್ಯ

(6ನೇ ಪುಟ ನೋಡಿ)

ಆರನೇ ಯೋಜನೆಯ ಬಗ್ಗೆ ಪ. ಬಂಗಾಳ ಸರ್ಕಾರದ ಟಿಪ್ಪಣಿಗಳು

(5ನೇ ಪುಟದಿಂದ)

ಕ್ರಮ ರೂಪಿಸುವುದನ್ನು ಯೋಜನಾ ಆಯೋಗ ತೀವ್ರವಾಗಿ ಪರಿಶೀಲಿಸಬೇಕಾಗಿದೆ.

19. ದೇಶದ ಒಂದು ಭಾಗದಿಂದ ಇನ್ನೊಂದಕ್ಕೆ ಕಚ್ಚಾ ವಸ್ತುಗಳು ಸುಲಭವಾಗಿ ಸಾಗಾಣಿಕೆಯಾಗುವುದಕ್ಕೆ ಇತ್ತೀಚಿನ ವರ್ಷಗಳಲ್ಲಿ ಅಡೆತಡೆಗಳು ಹೆಚ್ಚುತ್ತಿವೆ. ಯೋಜನೆಗೆ ಅರ್ಥ ಇರಬೇಕಾದರೆ ಇದನ್ನು ತಡೆಯಬೇಕು. ಅನೇಕ ವಸ್ತುಗಳಿಗೆ ರಾಷ್ಟ್ರದಾದ್ಯಂತ ಒಂದೇ ಬೆಲೆ ಇರುವ ಹಾಗೆ ನಿಯಮಗಳನ್ನು ಜಾರಿಗೆ ತರಬೇಕು.

ವಿಜ್ಞಾನ ಮತ್ತು ತಾಂತ್ರಿಕಜ್ಞಾನ:

20. ವಿಜ್ಞಾನ ಮತ್ತು ತಾಂತ್ರಿಕ ಜ್ಞಾನಗಳನ್ನು ವಿಸ್ತರಿಸುವ ಆಶಯವನ್ನು ಕರಡು ಯೋಜನಾ ಚೌಕಟ್ಟು ವಿಶದವಾಗಿ ವ್ಯಕ್ತಪಡಿಸುತ್ತದೆ. ಆದರೆ ಒಂದು ಮುಖ್ಯವಾದ ಕೊರತೆಯಿದೆ. ಪೆಟ್ರೋಲಿಯಂ ಉತ್ಪನ್ನಗಳ ಸರಬರಾಜು ತುಂಬ ಅನಿಶ್ಚಿತವಾಗಿರುವುದರಿಂದ ಶಕ್ತಿಯ (Energy) ಪರ್ಯಾಯ ಸಾಧ್ಯತೆಗಳನ್ನು ಹುಡುಕುವ ಅಗತ್ಯ ಬಹಳವಿದೆ. ಆದರೆ ಯೋಜನಾಚೌಕಟ್ಟು ಇದನ್ನು ಕುರಿತು ಏನನ್ನೂ ಹೇಳಿಲ್ಲ. ಇನ್ನು ಮುಂದಾದರೂ ಯೋಜನಾ ಆಯೋಗ ಈ ಬಗ್ಗೆ ಗಮನ ಹರಿಸಬೇಕು.

21. ಹೊಸ ಶಕ್ತಿಯ (Energy) ಮೂಲಗಳು ಅಥವಾ ಕೃಷಿ ಉತ್ಪಾದನೆಯನ್ನು ಹೆಚ್ಚಿಸುವುದು - ಯಾವುದೇ ವಿಚಾರವಾಗಲೀ ಆಮದು ಕಡಿಮೆ ಮಾಡುವ ಚಟುವಟಿಕೆಗಳನ್ನು ಯೋಜನಾ ಆಯೋಗದ ದಾಖಲೆ ಚರ್ಚಿಸಲು ನಿರಾಕರಿಸುತ್ತಿದೆ. ರಸಗೊಬ್ಬರಗಳು ಮತ್ತು ಪೆಟ್ರೋಲಿಯಂ ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುವ ಅಗತ್ಯವಿದೆಯೇ ಎಂಬುದನ್ನು ಕುರಿತು ಮಾತೇ ಇಲ್ಲ.

22. ರಾಜ್ಯ ಸರ್ಕಾರಗಳ ಯೋಜನಾ ಚೌಕಟ್ಟಿನಲ್ಲಿ ಹೊರಗಿನಿಂದ ಧನಸಹಾಯ ಪಡೆಯುವ ಯೋಜನೆಗಳೂ ಇವೆ. ರಾಜ್ಯಸರ್ಕಾರಗಳು ಯಾವ ವಿದೇಶಿ ವಿನಿಮಯದ ಸಹಾಯವನ್ನೂ ಪಡೆಯುವುದಿಲ್ಲ, ಈಗ ಅವುಗಳ ಶೇ. 70 ರೂಪಾಯಿಯ ಸಮಾನ ಹಣ ರಾಜ್ಯಗಳಿಗೆ ಸಂದಾಯವಾಗುತ್ತಿದೆ. ಶೇ. 100 ರಷ್ಟು ಸಮಾನ ಹಣ ಸಂದಾಯವಾಗದಿರುವುದಕ್ಕೆ ಯಾವ ಕಾರಣವೂ ಇಲ್ಲ.

23. ದೇಶದ ಆರ್ಥಿಕ ಬೆಳವಣಿಗೆ ಹೆಚ್ಚಬೇಕಾದರೆ ಮತ್ತು ಪ್ರಾದೇಶಿಕ ವಿತರಣೆಯು ಸಮಾನವಾಗಿ ಆಗಬೇಕಾದರೆ ವಿಕೇಂದ್ರೀಕರಣ ಆಗಲೇಬೇಕು ಎಂದು ಪ. ಬಂಗಾಳದ ಸರ್ಕಾರ ದೃಢವಾಗಿ ನಂಬಿದೆ. ಆರ್ಥಿಕ ತೀರ್ಮಾನ ಕೈಗೊಳ್ಳುವ ಎಂದರೆ ಆರ್ಥಿಕ ಯೋಜನೆ ಮಾಡುವ ಮತ್ತು ಜಾರಿ ಮಾಡುವ ಅಧಿಕಾರವೂ ವಿಕೇಂದ್ರೀಕರಣವಾಗಬೇಕು. 1978-83ರ ಅವಧಿಗೆ ರೂಪಿಸಿದ್ದ ಪಂಚವಾರ್ಷಿಕ ಕರಡು ಯೋಜನೆಯಲ್ಲಿ ಇದನ್ನು ಸ್ವಲ್ಪ ಮಟ್ಟಿಗಾದರೂ ಒಪ್ಪಲಾಗಿತ್ತು. ಶೇ. 50ಕ್ಕಿಂತ ಹೆಚ್ಚಿನ ಸಾರ್ವಜನಿಕ ವಲಯಕ್ಕೆ ಮೀಸಲಾದ ಹಣವನ್ನು ರಾಜ್ಯಗಳಿಗೆ ಹಂಚಲಾಗಿತ್ತು. ಈಗ 1980-85ರ ಯೋಜನೆಯಲ್ಲಿ 90,000 ಕೋಟಿ ಹಣ ಸಾರ್ವಜನಿಕ ವಲಯಕ್ಕೆ ಕೊಡಲಾಗಿದೆ. ಇದರಲ್ಲಿ ಕೊನೆಯ ಪಕ್ಷ 50 000 ಕೋಟಿಯನ್ನಾದರೂ ರಾಜ್ಯಗಳಿಗೆ ಕೊಡುವರೆಂದು ಸರ್ಕಾರ ಆಶಿಸುತ್ತದೆ.

24. ಯೋಜನೆಯನ್ನು ಜಾರಿಗೊಳಿಸುವ ಪ್ರಶ್ನೆಯಲ್ಲಿ, ಜನತೆಯನ್ನೂ ಯೋಜನಾಪ್ರಕ್ರಿಯೆಯೊಳಕ್ಕೆ ಸೆಳೆದುಕೊಳ್ಳುವುದರ ಅಗತ್ಯದ ಬಗ್ಗೆ ಯೋಜನಾ ಆಯೋಗದ ಕರಡು ಗಮನ ಸೆಳೆದಿದೆ. ಆದರೆ ಪಂಚಾಯತ್‌ಗಳಂಥ ಸಂಸ್ಥೆಗಳ ಪ್ರಾಮುಖ್ಯವನ್ನು ಸರಿಯಾಗಿ ಅರ್ಥೈಸಿಲ್ಲ. ಆದರೆ ಪಂಚಾಯತಿಗಳಲ್ಲದೆ ಟ್ರೇಡ್‌ಯೂನಿಯನ್‌ಗಳು, ಕಿಸಾನ್ ಸಭೆಗಳು, ಮಹಿಳೆಯರು, ಯುವಕರು, ವಿದ್ಯಾರ್ಥಿಗಳ ಸಂಘಟನೆಗಳು ಇವುಗಳ ಸಲಹೆಯನ್ನು ಕೂಡ ನಿರಂತರವಾಗಿ ಕೇಳಬೇಕು. ಈ ಅಂಶವನ್ನು ಹಿಂದೆ ಕಡೆಗಣಿಸಿದ್ದರಿಂದಲೇ ಯೋಜನೆಗಳು ತಮ್ಮ ಸಾಮಾಜಿಕ ಗುರಿಗಳನ್ನು ಮುಟ್ಟದೆ ವಿಫಲವಾದವು.

○

ದಲಿತ ವಿದ್ಯಾರ್ಥಿಗಳ ವಿಜಯ

ಬೆಂಗಳೂರು ಮಾಗಡಿ ರಸ್ತೆಯಲ್ಲಿರುವ ಬಾಪೂಜಿ ವಿದ್ಯಾರ್ಥಿನಿಲಯದಲ್ಲಿ ಸುಮಾರು 104 ಹರಿಜನ-ಗಿರಿಜನ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದು, ಅನೇಕ ವರ್ಷಗಳಿಂದ ತಮಗೆ ದೊರಕಬೇಕಾಗಿದ್ದ ಸವಲತ್ತುಗಳಿಂದ ವಂಚಿತರಾಗಿದ್ದರು. ಈ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಸಂಘಟಿತರಾಗಿ ಆಡಳಿತ ವರ್ಗದ ದುರಾಡಳಿತದ ವಿರುದ್ಧ ಪ್ರತಿಭಟಿಸತೊಡಗಿದ್ದರಿಂದ, ಆಡಳಿತ ವರ್ಗ ಕೆಲವು ಹಿರಿಯ ವಿದ್ಯಾರ್ಥಿಗಳನ್ನು ಆಪಾದನೆ ಹೊರಿಸಿ ನಿಲಯದಿಂದ ಮತ್ತು ಶಾಲೆಯಿಂದ ಹೊರದೂಡಿದ್ದರು. ಗೂಂಡಾಗಳನ್ನು ಬಿಟ್ಟು ನಿರಪರಾಧಿ ವಿದ್ಯಾರ್ಥಿಗಳನ್ನು ಅಮಾನುಷವಾಗಿ ಥಳಿಸಲಾಗಿದೆ. ಈ ಅನ್ಯಾಯವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ನಿಲಯದ ಅಧ್ಯಕ್ಷ ಹಾಗೂ ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷರಾದ ದುಗ್ಗಪ್ಪನವರ ಮನೆ ಮುಂದೆ ದಿ. 17-11-80ರಿಂದ ಧರಣಿ ಮುಷ್ಕರ ಪ್ರಾರಂಭಿಸಿದ್ದರು. ಈ ಹೋರಾಟದ ಫಲವಾಗಿ ಮರುದಿನವೇ ವಿದ್ಯಾರ್ಥಿಗಳ ಒತ್ತಾಯಕ್ಕೆ ಮಣಿದು ವಜಾ ಮಾಡಲ್ಪಟ್ಟ ವಿದ್ಯಾರ್ಥಿಗಳನ್ನು ನಿಲಯಕ್ಕೆ ಹಾಗೂ ಶಾಲೆಗೆ ತೆಗೆದುಕೊಳ್ಳುವಂತೆ ಮಾಡಲು ಸಾಧ್ಯವಾಯಿತು. ಈ ಹೋರಾಟದಲ್ಲಿ ಭಾಗವಹಿಸಿದ ವಿವಿಧ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಎಸ್. ಎಫ್. ಐ. ನಗರ ಸಮಿತಿ ಪರವಾಗಿ ಕಾಂ. ಬಸವಲಿಂಗಯ್ಯ ಕೃತಜ್ಞತೆ ಸೂಚಿಸಿದ್ದಾರೆ.

○

ಆರ್ಥಿಕ ಸಮೀಕ್ಷೆ :

(3ನೇ ಪುಟದಿಂದ)

ಸುಮಹಾಗಿಲ್ಲ. ಅವನು ಜಿಲ್ಲಾ ಸಮಿತಿಗಳ ಪಂಚಾಯತ್ ಸಮಿತಿಗಳ ಸಲಹೆಯಂತೆ ಕೆಲಸ ನಿರ್ವಹಿಸಬೇಕು. ಆದರೆ, ಕಾಂಗ್ರೆಸ್(ಐ)ಗೆ ಅಧಿಕಾರಶಾಹಿಗಳಲ್ಲಿಯೇ ನಂಬಿಕೆ, ಚುನಾಯಿತ ಪ್ರಜಾವಾದಿ ಸಮಿತಿಗಳ ಮೇಲೆ ನಂಬಿಕೆ ಇಲ್ಲ!

3. 'ಕೆಲಸಕ್ಕೆ-ಕಾಳು' ಯೋಜನೆಯು ನಿಶ್ಚಿತ ಉದ್ದೇಶಗಳ ಹೊರತು ಇತರ ಉದ್ದೇಶಗಳಿಗೆ ಬಳಸಲಾಗುತ್ತಿದೆ ಎಂದು ಮತ್ತೊಂದು ಅಪವಾದ. ಇದೂ ಸತ್ಯಕ್ಕೆ ದೂರ. ನೆರೆ ಹಾವಳಿಯಿಂದ ಸಂಕಷ್ಟಕ್ಕೊಳಗಾದ ಸಾವಿರಾರು ಜನರಿಗೆ ಪರಿಹಾರ ನೀಡಲು, ಅವರಿಗೆ ವಸತಿ, ಉದ್ಯೋಗ ಕೊಡಲು. ಅವರ ವ್ಯವಸಾಯ ಭೂಮಿಯಿಂದ ನೆರೆಯಲ್ಲಿ ಬಂದ ಹೊಯ್ಗೆ ತೆಗೆಯಿಸಲು 'ಕೆಲಸಕ್ಕೆ-ಕಾಳು' ಯೋಜನೆಯನ್ನು ಪ ಬಂಗಾಳದ ಸರಕಾರವು ಪರಿಣಾಮಕಾರಿಯಾಗಿ ಬಳಸಿತ್ತು. ಅದಕ್ಕೆ ಆಗಿನ ಜನತಾಪಕ್ಷದ ಕೇಂದ್ರ ಸರಕಾರದ ಅನುಮತಿಯನ್ನು ಪಡೆದಿತ್ತು. ಈ ಯೋಜನೆಯನ್ನು ಖಾಸಗೀ ಒಡೆತನದಲ್ಲಿದ್ದ ಕೆರೆ ಬಾವಿಗಳನ್ನು ದುರಸ್ತಿಗೊಳಿಸಲೂ ಉಪಯೋಗಿಸಲಾಗುತ್ತಿತ್ತು. ಈ ರಾಜ್ಯದ 1939, 1953 ಮತ್ತು 1974ರ ಶಾಸನಗಳಂತೆ (ಕಾಂಗ್ರೆಸ್ ಸರಕಾರಗಳೇ ರಚಿಸಿದ ಶಾಸನಗಳು) ನೀರಾವರಿಯ ಹಕ್ಕುಗಳನ್ನು ಸರಕಾರವೇ ವಹಿಸಿಕೊಂಡಿರುವ ಪ್ರದೇಶಗಳಲ್ಲಿ ಇಂತ ಕಾರ್ಯಕ್ರಮಗಳನ್ನು ಕೈಕೊಳ್ಳಲಾಗಿತ್ತು. ಇದಕ್ಕೂ ಕೇಂದ್ರ ಸರಕಾರದ ತಕರಾರು! ಬಡ ಜನರಿಗೆ, ನೆರೆ ಪೀಡಿತರಿಗೆ ಪರಿಹಾರ ನೀಡುವುದಕ್ಕೂ, ಇಂದಿರಾ ಕಾಂಗ್ರೆಸ್ ಸರಕಾರದ ವಿರೋಧ!

ಬಳಕೆಯ ಪ್ರಮಾಣದ ದಾಖಲೆಯನ್ನು ಕೇಳುವ ಕೇಂದ್ರ ಸರಕಾರ, ಕಾಂಗ್ರೆಸ್(ಐ) ರಾಜ್ಯಗಳಿಗೆ ಒದಗಿಸಿದ ಆಹಾರ ಧಾನ್ಯಗಳ ಲೆಕ್ಕಪತ್ರ ಪಡೆದಿದೆಯೇ? ಈ ರಾಜ್ಯಗಳಲ್ಲಿ ಆಹಾರಧಾನ್ಯಗಳು ನಿಶ್ಚಿತ ಕಾರ್ಯಕ್ರಮಗಳಿಗೆ ಬಳಸಲಾಗುತ್ತಿದೆಯೇ, ಬಡ ಗ್ರಾಮೀಣ ಜನರಿಗೆ ಪ್ರಯೋಜನ ಸಿಗುತ್ತಿದೆಯೋ ಅಥವಾ ಕಂಟ್ರಾಕ್ಟರುಗಳೇ ತಿಂದು ಹಾಕುತ್ತಿದ್ದಾರೆಯೇ, ಈ ಪ್ರಶ್ನೆಗಳನ್ನು ಕೇಂದ್ರ ಸರಕಾರ ಪರಿಶೀಲಿಸಿದೆಯೇ? ಇಲ್ಲ. ಕಾರಣ ಅದರ ಗುರಿ, ಕೇರಳ, ತ್ರಿಪುರಾ, ಪ. ಬಂಗಾಳ ರಾಜ್ಯಗಳಲ್ಲಿರುವ ಎಡ ಹಾಗೂ ಪ್ರಜಾಪ್ರಭುತ್ವವಾದಿ ಸರಕಾರಗಳನ್ನು ಉರುಳಿಸುವುದು, ಗ್ರಾಮೀಣ ಸ್ಥಾಪಿತ ಹಿತಾಸಕ್ತಿಗಳಿಗೆ, ನೌಕರ ಶಾಹಿಗಳಿಗೆ ಬೆಂಬಲ ನೀಡುವುದು ಆಗಿದೆ.

ಕಾಂಗ್ರೆಸ್(ಐ) ಕೇಂದ್ರ ಸರಕಾರದ ಪಕ್ಷಪಾತ ಧೋರಣೆಯನ್ನು ಪ್ರತಿಭಟಿಸಲು, ಕೇಂದ್ರವು ರಾಜ್ಯದ ಆಡಳಿತದಲ್ಲಿ ಹಸ್ತಕ್ಷೇಪ ಮಾಡುವುದನ್ನು ಪ್ರತಿಭಟಿಸಲು ರಾಜ್ಯದ ಉಪಚುನಾವಣೆಗಳನ್ನು ಮುಂದೂಡಿದುದನ್ನು ಪ್ರತಿಭಟಿಸಲು ತಾ॥ 27-11-80 ರಂದು 'ಪ. ಬಂಗಾಳ ಬಂದ್' ಆಚರಣೆಗೆ ಎಡರಂಗದ ಎಲ್ಲಾ ಪಕ್ಷಗಳೂ ಕರೆ ಕೊಟ್ಟಿವೆ. ಕಾಂಗ್ರೆಸ್(ಐ) ಕೇಂದ್ರ ಸರಕಾರದ ನಾಯಕರು ಇನ್ನಾದರೂ ಎಚ್ಚರಗೊಳ್ಳುವರೆ?

●

ವಿಚಾರವಾದಿಗಳ ಮೇಲೆ ಅಮಾನುಷ ದಾಳಿ

ದಿನಾಂಕ 10-11-80 ರಿಂದ 24-11-80ರವರೆಗೆ ಶಿವಮೊಗ್ಗದ ಶಂಕರಮಠದಲ್ಲಿ ಅತಿರುದ್ರ ಮಹಾಯಾಗ ನಡೆಯುತ್ತಿದೆ. ಯಾಗದ ಉದ್ದೇಶ ಶಾಂತಿ, ಸುಭಿಕ್ಷ, ಪುತ್ರಾಭಿವೃದ್ಧಿ, ದೇಶಾಭಿವೃದ್ಧಿ, ರಾಜಕೀಯ ಶಾಂತಿ ಇತ್ಯಾದಿಗಳು ಲಭಿಸುತ್ತವೆ ಎಂಬುದು ಈ ಯಾಗವನ್ನು ಸಂಘಟಿಸಿದ ಮಹಾನುಭಾವರ ಹೇಳಿಕೆ.

ಈ ಅಸಂಬದ್ಧ, ಅವೈಜ್ಞಾನಿಕ ಕಾರ್ಯಕ್ರಮವನ್ನು ಪ್ರತಿಭಟಿಸಲು ನಗರದ ವಿಚಾರವಾದಿ ಒಕ್ಕೂಟದವರು ನಿರ್ಧರಿಸಿದ್ದರು. ಜನಸಾಮಾನ್ಯರಿಗೆ ದುರ್ಲಭವಾದಿರುವ ಜೀವನಾವಶ್ಯಕ (ಧಾನ್ಯ, ತುಪ್ಪ, ಬಟ್ಟೆ ಇತ್ಯಾದಿ) ವಸ್ತುಗಳು ಸುಡುವ ವಿವೇಚನಾರಹಿತ ಕ್ರಮವನ್ನು ಪ್ರಶ್ನಿಸಿದ್ದರು.

ಮೊದಲೇ ನಿರ್ಧರಿಸಿದ್ದಂತೆ ವಿಚಾರವಾದಿ ಒಕ್ಕೂಟದ ಗೆಳೆಯರು ಮಹಾಯಾಗವನ್ನು ಪ್ರತಿಭಟಿಸುವ ಸಲುವಾಗಿ ದಿನಾಂಕ16-11-80ರಂದು ನಗರದ ನ್ಯಾಷನಲ್ ಹೈಸ್ಕೂಲಿನಲ್ಲಿ ಸಮಾವೇಶಗೊಳ್ಳುವ ಮುನ್ನವೇ ಗೂಂಡಾಗಳ ದಾಳಿಗೆ ತುತ್ತಾಗಿ, 15 ಜನ ವಿಚಾರವಾದಿಗಳು ತೀವ್ರದಾಳಿಗೆ ತುತ್ತಾಗಿರುವ ಆಘಾತಕರ ವರ್ತಮಾನ ಬಂದಿದೆ.

ವಿಚಾರವಾದಿಗಳ ಪ್ರತಿಭಟನೆಯನ್ನು-ದಮನಗೊಳಿಸುವ ಯೋಜನೆಯನ್ನು ಯಾಗದ ಅಧ್ವರ್ಯುಗಳು ಮೊದಲೇ ಕೈಗೊಂಡು ಬಾಡಿಗೆ ಗೂಂಡಾಗಳನ್ನು ಛೂಬಿಟ್ಟು ಅಲ್ಪ ಸಂಖ್ಯೆಯಲ್ಲಿದ್ದ ವಿಚಾರವಾದಿಗಳನ್ನು ಬೇಕಾಬಿಟ್ಟಿಯಾಗಿ ಥಳಿಸಲಾಗಿದೆ. ಈ ದಾಳಿಯು ಮುನ್ಸೂಚನೆಯನ್ನು ನಾಗರಿಕರ ರಕ್ಷಣೆಯ ಹೊಣೆ ಹೊತ್ತ ಪೋಲೀಸ್ ಅಧಿಕಾರಿಗೆ ತಿಳಿಸಿದ್ದರೂ ಆ ಅಧಿಕಾರಿ ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸಿದ್ದಾನೆ.

ಅದೇ ದಿನ ಸಂಜೆ ಬೃಹತ್ ಮೆರವಣಿಗೆ ಹೊರಡಿಸಿ ವಿಚಾರಸ್ವಾತಂತ್ರ್ಯದ ಮೇಲೆ ಹಲ್ಲೆ ನಡೆಸಿದ ಪುರೋಹಿತಶಾಹಿಯ ಗೂಂಡಾಗಳನ್ನು ಶಿಕ್ಷಿಸುವಂತೆ ಒತ್ತಾಯಿಸಲಾಯಿತು.

ಈ ದಾಳಿಯಲ್ಲಿ, ದೇಶೀಯ ವಿದ್ಯಾಶಾಲೆಯ ಪ್ರೊಫೆಸರ್ ಅಣತಿ, ಪ್ರೊ॥ ನಟರಾಜ್, ಭದ್ರಾ ಸ್ನಾತಕೋತ್ತರ ಕೇಂದ್ರದ ಉಪನ್ಯಾಸಕ ಶ್ರೀಕಂಠಕೊಡಿಗೆ ಹಾಗೂ ರಾಜಶೇಖರ, ದಿವಾಕರ ಹೆಗ್ಡೆ, ಗೋಪಾಲನಾಯ್ಕ ಮೊದಲಾದವರು ತೀವ್ರವಾಗಿ ಗಾಯಗೊಂಡಿದ್ದಾರೆ.

ಧಾರ್ಮಿಕ ಮೂಢನಂಬಿಕೆಗಳನ್ನು ಪ್ರಚುರಪಡಿಸುವ ಸ್ವಾತಂತ್ರ್ಯ ಕಾವಿಧಾರಿ ಸನ್ಯಾಸಿಗಳಿಗೆ, ವೈದಿಕರಿಗೆ ಇದ್ದಂತೆ ಅದು ಮೂಢನಂಬಿಕೆ ಎಂದು ಪ್ರತಿಭಟಿಸುವ ಹಕ್ಕು ಎಲ್ಲಾ ವಿಚಾರವಾದಿಗಳಿಗಿದೆ. ಈ ಕರಾಳ ಕೃತ್ಯದ ವಿರುದ್ಧ ನಾಡಿನ ಎಲ್ಲಾ ಪ್ರಗತಿಶೀಲರೂ ಪ್ರತಿಭಟಿಸಬೇಕಾದ ಅವಶ್ಯಕತೆಯಿದೆ.

○

ಬೆಂಗಳೂರು ಆಟೋ ಚಾಲಕರ ಮುಷ್ಕರ

ಆಟೋರಿಕ್ಷಾಗಳ ಪರವಾನಗಿ (ಪರ್ಮಿಟ್)ಯ ಮರು ಮಂಜೂರಾತಿಯನ್ನು ಆರ್. ಟಿ. ಓ. ಅಧಿಕಾರಿಗಳು ಏಕಪಕ್ಷೀಯವಾಗಿ ರದ್ದು ಮಾಡಿದುದನ್ನು ಮತ್ತು ಆಟೋಗಳ ದಾಖಲು ಪತ್ರಗಳು ನವೀಕರಿಸುವ ಸಮಯದಲ್ಲಿ ಆರ್. ಟಿ. ಓ. ವಶದಲ್ಲಿರುವುದಕ್ಕೆ ಗುರುತು ಚೀಟಿ ತೋರಿಸಿದರೂ ಪೋಲೀಸರು ಸುಳ್ಳು ಮೊಕದ್ದಮೆಗಳನ್ನು ಹೂಡುವುದನ್ನು ಪ್ರತಿಭಟಿಸಿ ದಿನಾಂಕ 13-11-80 ರಂದು ಮುಷ್ಕರ ಹೂಡಿದ್ದರು. ಈ ಮುಷ್ಕರ ಮುರಿಯಲು ಸರಕಾರ ಆಡಳಿತ ಯಂತ್ರವನ್ನು ಉಪಯೋಗಿಸಿದ್ದಲ್ಲದೇ ಪೋಲೀಸ್ ಕಮೀಷನರ್ ನಗರದಲ್ಲಿ ನಿಷೇಧಾಜ್ಞೆ ವಿಧಿಸಿ ಸಿ ಐ ಟಿ.ಯು. ವಿರೋಧಿ ಶಕ್ತಿಗಳಿಗೆ ಕುಮ್ಮಕ್ಕು ಕೊಟ್ಟಿದ್ದರೂ ಮುಷ್ಕರ ಯಶಸ್ವಿಯಾಯಿತು.

○

ಹಳ್ಳಿಯ ಬಡವರ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ರೈತ ಚಳುವಳಿಗೆ ಸೌಹಾರ್ದ ಬೆಂಬಲವಾಗಿ

ಡಿಸೆಂಬರ್ ೧೨ರಂದು ನಡೆಯಲಿರುವ ಬೃಹತ್ ರ‍್ಯಾಲಿ

ತಾವು ಪ್ರಾರಂಭಿಸಿದ ರೈತಚಳುವಳಿಯು ರಾಜ್ಯವ್ಯಾಪಿ ಮಾತ್ರವಲ್ಲ, ರಾಷ್ಟ್ರದಾದ್ಯಂತ ರೈತಚಳುವಳಿಯ ಅಲೆಯನ್ನು ಹೊಡೆದೆಬ್ಬಿಸುವುದು ಎನ್ನುವುದರ ಬಗ್ಗೆ ಜುಲೈ 21 ರಂದು ನರಗುಂದ, ನವಲಗುಂದ ಮತ್ತು ಸೌಂದತ್ತಿ ತಾಲ್ಲೂಕುಗಳಲ್ಲಿ ಬಂದ್ ಆಚರಿಸಲು ಕರೆ ಈಯುವಾಗ ಮಲಪ್ರಭ ರೈತ ಸಮನ್ವಯ ಸಮಿತಿಯ ಮುಂದಾಳುಗಳಿಗೆ ಕಿಂಚಿತ್ತೂ ಅರಿವಿದ್ದಿಲ್ಲ. ಆದರೆ ಮುಂದಿನ ಘಟನೆಗಳು ರೈತಾಪಿ ಜನರ ಸಂಕಷ್ಟ ಮತ್ತು ಅತೃಪ್ತಿ ಯಾವ ಮಟ್ಟಕ್ಕೆ ಹೋಗಿದೆ ಎಂಬುದನ್ನು ರುಜುಪಡಿಸಿವೆ. ರೈತಚಳುವಳಿಯು ಜನತೆಯ ಹೋರಾಟಕ್ಕೆ ಒಂದು ಹೊಸ ಆಯಾಮವನ್ನೇ ಇತ್ತಿದೆ.

ಸ್ವಾತಂತ್ರ್ಯ ನಂತರದ ಧೋರಣೆ :

ರೈತರ ಸಮಸ್ಯೆ, ಮತ್ತು ಎಲ್ಲಾ ರೈತರು ಸೇರಿದಂತೆ ಒಗ್ಗಟ್ಟಾಗಿ ನಡೆಯುತ್ತಿರುವ ಹೋರಾಟಗಳ ಬಗ್ಗೆ ಸ್ಪಷ್ಟ ಕಲ್ಪನೆ ಮಾಡಲು ದೇಶಕ್ಕೆ ಸ್ವಾತಂತ್ರ್ಯ ದೊರೆತ ಮೇಲೆ ನಮ್ಮನ್ನಾಳಿದ ಸರಕಾರಗಳು ಅನುಸರಿಸಿದ ಧೋರಣೆಯ ಬಗ್ಗೆ ಅರ್ಥಮಾಡುವುದು ಅವಶ್ಯ. ಸ್ವಾತಂತ್ರ್ಯ ದೊರೆತ ಮೇಲೆ ನಮ್ಮ ದೇಶವನ್ನಾಳಿದ ಸರಕಾರಗಳು (ಇವರಲ್ಲಿ ಸಿಂಹಪಾಲು ಕಾಂಗ್ರೆಸಿನದ್ದೇ) ಅನುಸರಿಸಿಕೊಂಡು ಬಂದ ಬಂಡವಾಳಶಾಹಿ ಪಥದ ಪರಿಣಾಮವಾಗಿ ಸಂಪತ್ತು ಹೆಚ್ಚಿರುವುದಾದರೂ ಹೆಚ್ಚಿನ ಮಂದಿ ಗರೀಬರಾಗಿರುವಂತಹ ವಿಪರ್ಯಾಸವಿದೆ! ಕಾರ್ಮಿಕವರ್ಗ, ರೈತಾಪಿ ಜನ ಮತ್ತು ಜನಸಾಮಾನ್ಯರನ್ನು ಕೂಲಿಗೆ ಮಾಡಿ ದೊಡ್ಡ ದೊಡ್ಡ ಬಂಡವಾಳಗಾರರನ್ನು ಬೆಳೆಸುವ ಧೋರಣೆಯ ಪರಿಣಾಮವಾಗಿ ಕಾರ್ಮಿಕರು, ರೈತರು ಮತ್ತು ಜನಸಾಮಾನ್ಯರು ಅತೀವ ಸಂಕಷ್ಟಗಳಿಗೊಳಗಾಗಿದ್ದಾರೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಅಸಮಾನ ಬೆಳವಣಿಗೆ, ವೈರುಧ್ಯಗಳ ಫಲವಾಗಿ, ಅಂದರೆ ಮುಖ್ಯವಾಗಿ ಔದ್ಯಮಿಕ ಬಂಡವಾಳಗಾರರು ಹಾಗೂ ವ್ಯಾಪಾರ ಬಂಡವಾಳಗಾರರು ಮತ್ತು ರೈತರೊಳಗೆ ಇರುವ ವೈರುಧ್ಯದ ಪರಿಣಾಮವಾಗಿ ತಾವು ಬೆಳೆಸಿದ ಕೃಷಿ ಉತ್ಪನ್ನಗಳಿಗೆ ಸರಿಯಾದ ಬೆಲೆಸಿಗದೆ ಇದ್ದು ತಾವು ಖರೀದಿಸುವ ವಸ್ತುಗಳಿಗೆ ತುಂಬಾ ಬೆಲೆತೆರಬೇಕಾದಂತಹ ಸಮಸ್ಯೆ ರೈತರನ್ನು ದಿವಾಳಿಮಾಡುತ್ತಿದೆ. ಇದರೊಂದಿಗೆ ಬಂಡವಾಳಶಾಹಿ ವ್ಯವಸ್ಥೆಯ ಬಿಕ್ಕಟ್ಟಿನ ಭಾರವನ್ನೂ ರೈತರ ಮೇಲೆ ಹೇರಲಾಗುತ್ತಿದೆ. ಆದರೆ ಈ ಎಲ್ಲಾ ಪರಿಸ್ಥಿತಿಯಲ್ಲಿ ನಿಜವಾಗಿಯೂ ದಿವಾಳಿಯಾಗುವುದು, ಭೂಮಿ ಕಳೆದುಕೊಳ್ಳುವುದು-ಇತ್ಯಾದಿ ಬಡ ಮತ್ತು ಮಧ್ಯಮ ರೈತರೇ ಹೊರತು ದೊಡ್ಡ ಜಮೀನ್ದಾರರಲ್ಲ. ಇದಕ್ಕೆ ಕಾರಣ ರೈತಾಪಿ ಜನರ ಬೇರೆಬೇರೆ ವರ್ಗಗಳೊಳಗಿರುವ ವೈರುಧ್ಯ.

ಬಂಡವಾಳಶಾಹಿ ವ್ಯವಸ್ಥೆ ಬೆಳೆದಂತೆಲ್ಲಾ ನಗರ ಮತ್ತು ಹಳ್ಳಿಗಳೊಳಗಿನ ವೈರುಧ್ಯ, ನಗರದೊಳಗೆ ಬೇರೆ ಬೇರೆ ವರ್ಗಗಳೊಳಗೆ ವೈರುಧ್ಯ, ಗ್ರಾಮೀಣ ಪ್ರದೇಶದಲ್ಲಿ ಬೇರೆಬೇರೆ ವರ್ಗಗಳೊಳಗೆ ವೈರುಧ್ಯ-ಹೀಗೆ ಹಲವಾರು ವೈರುಧ್ಯಗಳೂ ಬೆಳೆಯುವುದು ಸ್ವಾಭಾವಿಕ. ಇದೇ ಕಾರಣದಿಂದ ಬೇರೆಬೇರೆ ರೀತಿಯ ಅಸಮಾನತೆ, ಸಂಪತ್ತಿನ ವಿತರಣೆ, ಸವಲತ್ತುಗಳು ದೊರೆಯುವಿಕೆ-ಇವೆಲ್ಲಾ ಬಂಡವಾಳಶಾಹಿಗಳಿಗೆ ಅನುಕೂಲವಾಗಿ ರೂಪಿತವಾಗುತ್ತದೆ. ಹಾಗೆಯೇ ರಾಜ್ಯ, ರಾಜ್ಯಗಳೊಳಗಿನ ಅಸಮಾನತೆ, ಪ್ರದೇಶಪ್ರದೇಶಗಳೊಳಗಿನ ಅಸಮಾನತೆ-ಎಲ್ಲವೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿನ ಅಸಮಾನ ಬೆಳವಣಿಗೆಯ ನಿಯಮದಿಂದಲೇ ರೂಪಿತವಾಗುತ್ತದೆ. ಇದನ್ನು ಮುಚ್ಚಿಡಲು ಬಂಡವಾಳಶಾಹಿ ವ್ಯವಸ್ಥೆಯ ಪ್ರತಿಪಾದಕರುಗಳು ಪೇಟೆಯ ಕಾರ್ಮಿಕರನ್ನು ಹಳ್ಳಿಯ ಬಡವರಿಗೆ, ರೈತರಿಗೆ ವಿರೋಧವೆಂಬಂತೆಯೂ ಮತ್ತು ಇದೇ ರೀತಿಯ ಹಲವಾರು ತಪ್ಪು ಪ್ರಚಾರಗಳಿಂದ ಪ್ರಯತ್ನಿಸುವರು.

ಬಂಡವಾಳಶಾಹಿ ಬೆಳವಣಿಗೆಯ ಪರಿಣಾಮವಾಗಿ ರೈತರೆಲ್ಲರೂ ಶೋಷಣೆಗೆ ಒಳಗಾಗುವುದರಿಂದ, ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಹಾಗೂ ಇನ್ನಿತರ ಎಲ್ಲಾ ರೈತರಿಗೂ ಅನುಕೂಲವಾಗುವ ಬೇಡಿಕೆಗಳಿಗೆ ಬಡರೈತರಿಂದ ಮೊದಲ್ಗೊಂಡು ಶ್ರೀಮಂತ ರೈತರ ತನಕ ಎಲ್ಲರದ್ದೂ ಬೆಂಬಲ ದೊರೆಯುತ್ತದೆ. ಹಾಗೆಯೇ ವರ್ಗೀಕರಣ ಸ್ಪಷ್ಟ ರೂಪಿತಗೊಂಡಿಲ್ಲದೆ, ರೈತರೊಳಗಿನ ವೈರುಧ್ಯ ತೀವ್ರವಾಗಿಲ್ಲವಾದರೆ ಮತ್ತು ಬಡ ಹಾಗೂ ಮಧ್ಯರೈತರ ಸಂಘಟನೆ ಸಾಕಷ್ಟಿಲ್ಲವಾದರೆ ರೈತರೆಲ್ಲರೂ ಒಂದಾಗಿ ಹೋರಾಡುವುದು ಸ್ವಾಭಾವಿಕ. ಈ ರೀತಿಯ ಹೋರಾಟದ ಮುಂಚೂಣಿಯಲ್ಲಿ ಶ್ರೀಮಂತ ವಿಭಾಗವು ಇರುವುದಕ್ಕೆ ಪ್ರಯತ್ನಿಸುವುದು ಸ್ವಾಭಾವಿಕ. ಹೋರಾಟದ ಮುಂಚೂಣಿಯಲ್ಲಿ ಯಾರಿರುವರು ಯಾವ ವಿಭಾಗದ ಸಮಸ್ಯೆಗಳ ಬಗ್ಗೆ ಹೋರಾಟ ನಡೆದಿದೆ ಮತ್ತು ಬೇಡಿಕೆಗಳೇನು ಎಂಬುದು ಮುಖ್ಯ.

ರೈತ ಚಳುವಳಿಗೆ ಬೆಂಬಲವೇಕೆ?

ರೈತರೆಲ್ಲಾ ಒಗ್ಗಟ್ಟಾಗಿ ಸರಕಾರದ ದಿವಾಳಿಕೋರ ನೀತಿಗೆದುರಾಗಿ ಹೋರಾಡುತ್ತಿರುವುದರಿಂದಲೂ, ರೈತರು ಬೆಳೆಸಿದ ಬೆಳೆಗಳಿಗೆ ಹೆಚ್ಚು ಬೆಲೆ ಸಿಗುವುದರಿಂದ ರೈತರಲ್ಲಿ ಬಹುಸಂಖ್ಯಾತರಾಗಿರುವ ಬಡ ಮತ್ತು ಮಧ್ಯ ರೈತರಿಗೂ ಅನುಕೂಲವಾಗುವುದರಿಂದಲೂ, ಕೃಷಿಕೂಲಿಗಾರರಿಗೆ ಹೆಚ್ಚಿನ ವೇತನದ ಬೇಡಿಕೆ ಈಡೇರಬೇಕಾದರೆ ರೈತರಿಗೆ ಕೃಷಿ ಉತ್ಪನ್ನಗಳಿಗೆ ಹೆಚ್ಚಿನ ಬೆಲೆ ಸಿಗುವುದು ಅವಶ್ಯವಿರುವುದರಿಂದಲೂ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಎಲ್ಲಾ ರೈತರೂ ಶೋಷಣೆಗೆ ಒಳಗಾಗಿರುವುದರಿಂದಲೂ, ಕಾರ್ಮಿಕ ವರ್ಗದ ಪಕ್ಷವಾದ, ಜನತೆಯ ಸಾಮೂಹಿಕ ಕ್ರಾಂತಿಕಾರಿ ಪಕ್ಷವಾದ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷವು ರೈತ ಚಳುವಳಿಗೆ ಬೆಂಬಲವೀಯುತ್ತದೆ. ರೈತರೆಲ್ಲರೂ ಒಗ್ಗಟ್ಟಾಗಿ ನಡೆಸುವ ಚಳುವಳಿಯಲ್ಲಿ ಸಕ್ರಿಯವಾಗಿ ಭಾಗವಹಿಸುವುದು, ಸಾಧ್ಯವಿದ್ದಲ್ಲೆಲ್ಲಾ ಮುತುವರ್ಜಿವಹಿಸಿ ಪಕ್ಷ ಮತ್ತು ಅದರ ಸಂಘಟನೆಗಳು ನೇತೃತ್ವವಹಿಸಿ ವಿಶಾಲ ತಳಹದಿಯ ಐಕ್ಯತೆಯಿಂದ ರೈತ ಚಳುವಳಿ ಬೆಳೆಸುವುದು, ಹಳ್ಳಿಯ ಬಡವರ ಸಮಸ್ಯೆಗಳಿಗಾಗಿಯೂ ಹೋರಾಡುವಂತೆ ರೈತಚಳುವಳಿಗಾರರಿಗೆ ಒತ್ತಾಯಿಸುವುದು-ಈ ಕ್ರಮಗಳಿಂದ ರೈತ ಚಳುವಳಿಗೆ ಹೊಸ ಆಯಾಮವನ್ನೇ

—ಎಂ. ಕೆ. ಭಟ್

ಯಬಹುದು; ಚಳುವಳಿಗೆ ಹಳ್ಳಿಯ ಅತ್ಯಂತ ಬಡವರನ್ನು ಇಳಿಸಿ. ಚಳುವಳಿಯ ವ್ಯಾಪ್ತಿಯನ್ನು ಹೆಚ್ಚಿಸಬಹುದು. ಚಳುವಳಿಯನ್ನು ಬೇರಾರೋ ನಡೆಸುತ್ತಾರೆ ಎನ್ನುವುದಕ್ಕೆ ಬದಲು, ಅದರಲ್ಲಿ ಸಕ್ರಿಯವಾಗಿ ಭಾಗವಹಿಸಿ, ಚಳುವಳಿಗೆ ಬೇರೆಯೇ ರೂಪ ಬರುವಂತೆ ಮಾಡಬೇಕು.

ಹಳ್ಳಿಯ ಬಡವರ ಸಮಸ್ಯೆಗಳು :

ಹಳ್ಳಿಯ ಭೂರಹಿತ ಬಡಜನರು, ಕೃಷಿಕೂಲಿಗಾರರು, ಬಡ ಮತ್ತು ಮಧ್ಯಮ ರೈತರನ್ನು ಒಟ್ಟಾಗಿ ಹಳ್ಳಿಯ ಬಡವರೆನ್ನಬಹುದು. ಕೃಷಿಕೂಲಿಗಾರರ ವಿಭಾಗ ಅತ್ಯಂತ ಹೆಚ್ಚಿನ ಶೋಷಣೆಗೆ ಒಳಗಾಗಿದೆ. ಭಾರತದೇಶದಲ್ಲಿ ಸಾಮಾಜಿಕವಾಗಿ ಕೆಳತಳ್ಳಲ್ಪಟ್ಟವರೇ ಬಹುಸಂಖ್ಯೆಯಲ್ಲಿರುವ ಕೃಷಿಕೂಲಿಗಾರರನ್ನು ಮುಖ್ಯವಾಗಿ ಶೋಷಿಸುವುದು ಗ್ರಾಮೀಣ ಪ್ರದೇಶದ ಶ್ರೀಮಂತ ವಿಭಾಗ. ಹಾಗೆಯೇ ಬಡ ಮತ್ತು ಮಧ್ಯ ರೈತರನ್ನೂ ಹಳ್ಳಿಯ ಶ್ರೀಮಂತ ವಿಭಾಗ ಶೋಷಿಸುತ್ತದೆ. ಸರಕಾರಿ ಸಾಲವಿರಲಿ, ಬೇರೆ ಬೇರೆ ಸವಲತ್ತುಗಳ ಪ್ರಯೋಜನವಿರಲಿ, ಬೆಳೆದ ಬೆಳೆಗೆ ಸಿಗುವ ಬೆಲೆ ಇರಲಿ, ಹೆಚ್ಚಿನ ವಿದ್ಯಾಭ್ಯಾಸವಿರಲಿ-ಇವೆಲ್ಲಾ ಶ್ರೀಮಂತ ರೈತ, ಭೂಮಾಲೀಕ ವಿಭಾಗದವರಿಗೇ ಸಿಗುತ್ತದೆ. ಇದರೊಂದಿಗೆ ಖಾಸಗಿ ಸಾಲವು ಹಳ್ಳಿಯ ಬಡವರನ್ನು ದಾಸ್ಯದ ಸಂಕಲೆಗೆ ಸಿಗುವಂತೆಯೂ ಮಾಡುತ್ತದೆ. ಆದುದರಿಂದ ಹಳ್ಳಿಯ ಬಡವರ ಬಲಿಷ್ಠ ಸಂಘಟನೆ ಮತ್ತು ಹೋರಾಟಗಳಿಲ್ಲದೆ ಕೃಷಿಕೂಲಿಗಾರರಿಗೆ ಹೆಚ್ಚಿನ ವೇತನವೂ, ಸಣ್ಣಪುಟ್ಟ ರೈತರಿಗೆ ನ್ಯಾಯವೂ ದೊರೆಯಲಾರದು. ಬಂಡವಾಳಗಾರ ವ್ಯವಸ್ಥೆಯ ಪರಿಣಾಮಗಳ ವಿರುದ್ಧ ಎಲ್ಲಾ ರೈತರು ಒಂದಾಗಿ ಹೋರಾಡುತ್ತಿರುವಾಗಲೇ ಹಳ್ಳಿಯ ಬಡವರು ತಮ್ಮ ಬೇಡಿಕೆಗಳಿಗಾಗಿ ತಮ್ಮದೇ ಆದ ಸಂಘಟನೆ ಮತ್ತು ಹೋರಾಟಗಳನ್ನು ಬೆಳೆಸಬೇಕು. ಈ ಎರಡರಲ್ಲಿ ಯಾವುದಕ್ಕೆ ಹೆಚ್ಚಿನ ಮಹತ್ವವನ್ನೀಯಬೇಕು ಎಂಬುದು ವಿಶಿಷ್ಟ ಪರಿಸ್ಥಿತಿ, ಸಂಘಟನಾ ಸ್ಥಿತಿ ಮತ್ತು ಹೋರಾಟದ ಸನ್ನಿವೇಶಗಳನ್ನು ಹೊಂದಿಕೊಂಡಿದೆ.

ಇಂದಿನ ಪರಿಸ್ಥಿತಿಯಲ್ಲಿ ಎಲ್ಲಾ ರೈತರು ಒಗ್ಗಟ್ಟಾಗಿ ನಡೆಸುವ ಹೋರಾಟಕ್ಕೆ ಸಕ್ರಿಯ ಬೆಂಬಲವೀಯುವುದು ಅವಶ; ಇದರಿಂದ ಹಳ್ಳಿಯ ಬಡವರ ಸಂಘಟನೆ ಮತ್ತು ಹೋರಾಟವನ್ನೂ ತಿಳಿಸಬಹುದು. ಆದರೆ ಇದೇ ಸಂದರ್ಭದಲ್ಲಿ ಹಳ್ಳಿಯ ಬಡವರದ್ದೇ ಆಗಿರುವ ಪ್ರತ್ಯೇಕ ಕಾರ್ಯಕ್ರಮಗಳ ಮೂಲಕ ಅವರ ಸಮಸ್ಯೆಗಳ ಪರಿಹಾರದತ್ತ ಗಮನ ಮತ್ತು ಸಂಘಟನೆಗಳನ್ನು ಬೆಳೆಸಬೇಕು. ಸಂಘಟನೆ ಮತ್ತು ಪ್ರಜ್ಞೆ ಬೆಳೆದಂತೆಲ್ಲಾ ಶ್ರೀಮಂತ ವಿಭಾಗವು ನಡೆಸುವ ಶೋಷಣೆ ವಿರುದ್ಧ ಇವರ ಹೋರಾಟ ಬಲಗೊಳ್ಳುವುದು ಸಾಧ್ಯ.

"ಇಂದಿನ ವಿಶಿಷ್ಟ ಪರಿಸ್ಥಿತಿಯಲ್ಲಿ ಹಳ್ಳಿಯ ಬಡವರ ಹೋರಾಟವು ಎಲ್ಲ ರೈತರು ಒಟ್ಟಾಗಿ ನಡೆಸುವ ಸರಕಾರಿ ವಿರೋಧ ಚಳುವಳಿಯನ್ನು ದುರ್ಬಲಗೊಳಿಸುವಂತಾಗಬಾರದು. ಹಾಗೆಯೇ ಕೃಷಿಕೂಲಿಗಾರರಿಗೆ ಹೆಚ್ಚಿಗೆ ವೇತನದಂತಹ ಬೇಡಿಕೆಯನ್ನು ರೈತ ಚಳುವಳಿಗಾರರು ವಿರೋಧಿಸಬಾರದು, ಕೃಷಿ ಉತ್ಪನ್ನದ ಬೆಲೆ ನಿರ್ಧಾರ ಮಾಡುವಾಗ, ಆದ ಖರ್ಚಿನ ಲೆಕ್ಕ ಹಾಕುವಾಗ ಕೃಷಿಕೂಲಿಗಾರನಿಗೆ ಕೊಟ್ಟ ವೇತನವೂ ಸೇರುತ್ತದೆ." ಕೃಷಿಕೂಲಿಗಾರರಿಗೆ ತಾವು ಸಾಮಾನ್ಯ ಮಾನವರಂತೆ ಜೀವಿಸಲು ಅವಶ್ಯವಿರುವಷ್ಟು ವೇತನ ಸಿಗಲೇಬೇಕು; ಈ ದಾಮಾಷಯದಲ್ಲಿ ಕೃಷಿ ಉತ್ಪನ್ನಗಳ ಬೆಲೆಯೂ ಏರಲೇಬೇಕು. ಸಾಲದ ಪ್ರಶ್ನೆ ಬಂದಾಗ ಸರಕಾರಿ ಸಾಲ ಮಾತ್ರವೇ ಅಲ್ಲ ಎಲ್ಲಾ ರೀತಿಯ ಖಾಸಗಿ ಸಾಲದ ಪರಿಹಾರವಾಗಬೇಕು. ಈ ಪ್ರಶ್ನೆಯಲ್ಲೂ ಸಣ್ಣಪುಟ್ಟ ರೈತರನ್ನು ಎಲ್ಲಾ ರೀತಿಯ ಸಾಲಗಳಿಂದ ಮುಕ್ತಗೊಳಿಸಬೇಕು. ಖಾಸಗಿ ಆರ್ಥಿಕ ಹಿಡಿತದಿಂದ ಹಳ್ಳಿಯ ಬಡವರು ಮುಕ್ತಿಗೊಳ್ಳಲು, ಕಡಿಮೆ ಬಡ್ಡಿ ಅಥವಾ ನಿರ್ಬಡ್ಡಿಯಲ್ಲಿ ಸಹಕಾರಿ ವ್ಯವಸ್ಥೆಯ ಮೂಲಕ ಹಳ್ಳಿಯ ಬಡವರಿಗೆ ಸಾಲ ಸೌಲಭ್ಯ ದೊರೆಯುವಂತಾಗಬೇಕು. ಶ್ರೀಮಂತ ವಿಭಾಗದ ಆರ್ಥಿಕ ರಾಜಕೀಯ ಹಿಡಿತ ತಪ್ಪಬೇಕು.

ಅಪಪ್ರಚಾರ :

ರೈತ ಚಳುವಳಿಯ ನೇತೃತ್ವ ತಮ್ಮಲ್ಲೇ ಇದ್ದು, ಪ್ರಯೋಜನ ತಮ್ಮ ವಿಭಾಗಕ್ಕೆ ಸಿಗಬೇಕೆಂಬ ದೃಷ್ಟಿಯಿಂದ ಶ್ರೀಮಂತ ರೈತ ವಿಭಾಗವು ಅಥವಾ ಕೆಲವು ಸ್ವಾರ್ಥಪರ ಹಿತಾಸಕ್ತಿಗಳು ಚಳುವಳಿಯ ವ್ಯಾಪ್ತಿಯನ್ನು ಕುಂಠಿತಗೊಳಿಸಲು ಪ್ರಯತ್ನಿಸುವುದು ಸ್ವಾಭಾವಿಕ. ಕೃಷಿಕೂಲಿಗಾರರನ್ನು ಬೊಟ್ಟುಮಾಡಿ ತೋರಿಸಿ, ಬಡ ಮತ್ತು ಮಧ್ಯ ರೈತರನ್ನು ಅವರಿಂದ ದೂರೀಕರಿಸುವುದು; ಪೇಟೆ ಮತ್ತು ಹಳ್ಳಿಗಳೊಳಗಿರುವ ವೈರುಧ್ಯಕ್ಕೆ ಮತ್ತು ಅಸಮಾನತೆಗಳಿಗೆ ಪೇಟೆಯ ಕಾರ್ಮಿಕವರ್ಗವೆಂದು ಹೇಳಿ ಕಾರ್ಮಿಕ ಮತ್ತು ರೈತರ ಸಖ್ಯತೆ ಬೆಳೆಯದಂತೆ ಮಾಡುವುದು; ರಾಜಕೀಯವೇ ಬೇಡವೆಂದು ಹೇಳಿ ತಮ್ಮ ರಾಜಕೀಯವನ್ನು ಬೆಳೆಸುವುದು ಈ ಎಲ್ಲಾ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ಇದರೊಂದಿಗೆ ಬೆಲೆ ಏರಿಕೆಯನ್ನು ತಡೆಗಟ್ಟಬೇಕು ಎನ್ನುವ ಘೋಷಣೆ ಮತ್ತು ಹೋರಾಟ ರೈತರಿಗೆ ವಿರೋಧವಾಗಿದೆ ಎಂಬ ಪ್ರಚಾರವೂ ನಡೆದಿದೆ. ಈ ಅಪಪ್ರಚಾರಗಳ ವಿರುದ್ಧ ಹೋರಾಡುವುದು ಅತೀ ಅಗತ್ಯ. ಒಂದೆಡೆ ಬೆಲೆಏರಿಕೆ ಮತ್ತು ಹಣದುಬ್ಬರವನ್ನು ತಡೆಯಬೇಕು; ಇನ್ನೊಂದೆಡೆ ರೈತರ ಬೆಳೆಗೆ ಹೆಚ್ಚಿನ ಬೆಲೆಸಿಗಲೇಬೇಕು. ಇವೆರಡೂ ಒಮ್ಮೆಲೇ ಆಗಬೇಕಾದರೆ ರೈತರ ಬೆಳೆಗೆ ಸರಕಾರವೇ ಹೆಚ್ಚಿಗೆ ಬೆಲೆತೆತ್ತು ಖರೀದಿಸಬೇಕು. ಔದ್ಯಮಿಕ ಬಂಡವಾಳಗಾರರ ಮತ್ತು ಕಾಳಸಂತೆ ಖದೀಮರ ಲಾಭವನ್ನು ಕುಂಠಿತಗೊಳಿಸಬೇಕು. ಸಬ್ಸಿಡಿ ಮೂಲಕ ಜೀವನಾವಶ್ಯಕ ವಸ್ತುಗಳನ್ನು ಜನತೆಗೆ ಹಂಚಬೇಕು.

ರೈತ-ಕಾರ್ಮಿಕ ಸಖ್ಯತೆ :

ಪೇಟೆಯ ಕಾರ್ಮಿಕರು ಮತ್ತು ಹಳ್ಳಿಯ ಬಡವರು ಪರಸ್ಪರ ಶತ್ರುಗಳಲ್ಲ; ಬದಲು ಮಿತ್ರರು. ಹಳ್ಳಿಯ ಬಡವರಿಗೆ ಇರುವ ಆಪ್ತರು ಹಳ್ಳಿಯ ಶ್ರೀಮಂತರು ಅಥವಾ ಪಟ್ಟಣದ ಬಂಡವಾಳಗಾರರಲ್ಲ; ಪೇಟೆಯ ಕಾರ್ಮಿಕರೇ ಇವರ ಆಪ್ತರು. ಶೋಷಣೆಯ ವಿರುದ್ಧ ಮತ್ತು ಸಮಾಜ ಬದಲಾವಣೆಗಾಗಿ ನಡೆಯುವ ಹೋರಾಟದಲ್ಲಿ ಕಾರ್ಮಿಕರ ಮತ್ತು ಹಳ್ಳಿಯ ಬಡವರ ಸಖ್ಯತೆಯು ಪ್ರಾಮುಖ್ಯವಾಗಿದೆ. ಹಳ್ಳಿಯ ಬಡವರ ಸಂಘ

(8ನೇ ಪುಟ ನೋಡಿ)

ಬಿನ್ನಿಮಿಲ್ ಕಾರ್ಮಿಕರ ಹೋರಾಟ

ಸೌಹಾರ್ದ ಸಭೆ

(2ನೇ ಪುಟದಿಂದ)

ಘೋಷಿಸುವುದರಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಆಡಳಿತವರ್ಗದ ನ್ಯಾಯಬಾಹಿರ ಕ್ರಮದಿಂದ ಸಿಡಿದೆದ್ದ ಕಾರ್ಮಿಕರು ಹೋರಾಟ ಪ್ರಾರಂಭಿಸಿದ್ದರು.

ಸಿ.ಐ.ಟಿ.ಯು. ಬೆಂಬಲ :

ಪ್ರಾರಂಭದಿಂದಲೂ ಡಿ. ವೆಂಕಟೇಶರ ಪ್ರತಿಗಾಮಿ ನಾಯಕತ್ವವನ್ನು ಬಯಲಿಗೆಳೆಯುತ್ತ ಬಂದಿದ್ದ ಸಿ. ಐ. ಟಿ. ಯು. ಬಿನ್ನಿಮಿಲ್ ಕಾರ್ಮಿಕರಿಗೆ ತನ್ನ ಸಂಪೂರ್ಣ ಬೆಂಬಲ ನೀಡಿತು.

ದಿನಾಂಕ-13-11-80 ರಂದು ನಗರದ ಶಿರಸಿವೃತ್ತದಲ್ಲಿ ಬಿನ್ನಿಮಿಲ್ ಕಾರ್ಮಿಕರ ಬೆಂಬಲಾರ್ಥ ಸಿ. ಐ.ಟಿ. ಯು. ಬಹಿರಂಗ ಸಭೆ ಏರ್ಪಡಿಸಿತ್ತು. ನೆರೆದಿದ್ದ 3000 ಜನ ಕಾರ್ಮಿಕರನ್ನು ಉದ್ದೇಶಿಸಿ ಮಾತನಾಡಿದ ಕಾಂ. ಸೂರ್ಯನಾರಾಯಣ ರಾವ್ ಡಿ. ವೆಂಕಟೇಶರನ್ನು ಧಿಕ್ಕರಿಸಿದ ಬಿನ್ನಿ ಕಾರ್ಮಿಕರನ್ನು ಪ್ರಶಂಸಿಸುತ್ತಾ ಐಕ್ಯ ಕಾರ್ಯಾಚರಣೆಗೆ ಕರೆ ಕೊಟ್ಟರು. ರಾಜ್ಯದ ಕಾರ್ಮಿಕರ ಹೋರಾಟದ ಸಮಯಗಳಲ್ಲಿ ಡಿ. ವೆಂಕಟೇಶ ಮಾಡಿದ ಪಿತೂರಿಗಳನ್ನು ನೆನಪಿಗೆ ತಂದರು.

ಸಿ. ಐ. ಟಿ. ಯು. ವಿನ ಸತತ ಪ್ರಯತ್ನದಿಂದ ನಗರದ ಎಲ್ಲ ಕಾರ್ಮಿಕರ ಸಂಘಗಳ ಪ್ರತಿನಿಧಿಗಳನ್ನೊಳಗೊಂಡ ಸೌಹಾರ್ದತಾ ಸಮಿತಿಯನ್ನು ದಿನಾಂಕ 17-11-80 ರಂದು ರೂಪಿಸಲಾಯಿತು. ಆಡಳಿತವರ್ಗದ ಕುತಂತ್ರವನ್ನು ಉಗ್ರವಾಗಿ ಖಂಡಿಸಿ ಜಂಟೀ ಹೋರಾಟದ ತೀರ್ಮಾನಕ್ಕೆ ಬರಲಾಯಿತು.

ದಿನಾಂಕ 21-11-80ರಂದು ಸೌಹಾರ್ದತಾ ಸಮಿತಿಯ ಆಶ್ರಯದಲ್ಲಿ ಚಿಕ್ಕಲಾಲ್‌ಬಾಗ್‌ನಲ್ಲಿ ಬೃಹತ್ ಬಹಿರಂಗ ಸಭೆ ನಡೆಯಿತು. ಸಭೆಯನ್ನು ಉದ್ದೇಶಿಸಿ ಮೈಕೆಲ್ ಫರ್ನಾಂಡಿಸ್, ಶ್ರೀ ರಾಮುಲು, ಕಾಂ. ಎಸ್. ಸೂರ್ಯನಾರಾಯಣರಾವ್, ಕಾಂ. ಎಂ.ಎಸ್. ಕೃಷ್ಣನ್, ಕಾಂ. ವಿ.ಜೆ. ಕೆ. ನಾಯರ್ ಮತ್ತು ಕಾಂ. ಕೆ. ವಿ ಶ್ರೀನಿವಾಸ್ (ಎಲ್.ಐ.ಸಿ) ಮುಂತಾದ ಕಾರ್ಮಿಕ ನಾಯಕರು ಮಾತನಾಡಿ ಸರಕಾರ ತಕ್ಷಣ ಮಧ್ಯಪ್ರವೇಶಿಸಿ ಕಾನೂನು ಬಾಹಿರ ಲಾಕೌಟನ್ನು ಬಹಿಷ್ಕರಿಸುವಂತೆ ಒತ್ತಾಯಪಡಿಸಿದರು.

ಸುಮಾರು 25 ದಿನಗಳ ಕಾಲ ನಡೆದ ಹೋರಾಟದ ನಂತರ ಕೇಂದ್ರದ ಸರಕಾರ ಮಧ್ಯಪ್ರವೇಶಿಸಿ ಒಪ್ಪಂದಕ್ಕೆ ಬರುವಂತೆ ಆಡಳಿತವರ್ಗಕ್ಕೆ ಒತ್ತಾಯಿಸಿದೆ. ವಿವಾದಗಳನ್ನು ಸುಮುಖವಾಗಿ ಬಗೆಹರಿಸಿಕೊಳ್ಳಬೇಕೆಂಬ ನಿರ್ಧಾರಕ್ಕೆ ಬರಲಾಗಿದ್ದು ದಿನಾಂಕ 28 ರಿಂದ ಮಿಲ್‌ಅನ್ನು ಪಾರಂಭಿಸಲು ನಿರ್ಧರಿಸಿರುವ ವರದಿಗಳು ಬಂದಿವೆ.

○

ತೀವ್ರವಾಗುತ್ತಿರುವ ಕೋಲಾರ ರೈತ ಚಳುವಳಿ

(1ನೇ ಪುಟದಿಂದ)

ಅಶ್ವತ್ಥನಾರಾಯಣರೆಡ್ಡಿ ಮುಂತಾದವರ ನೇತೃತ್ವದಲ್ಲಿ ಮೆರವಣಿಗೆ ನಡೆಯಿತು. ಶ್ಯಾಂಪ್ರಸಾದ, ವೆಂಕಟೇಗೌಡ, ಹರೀಂದ್ರ, ಮತ್ತಿತರರು ಪಿಕೆಟಿಂಗ್‌ನ ಮುಂದಾಳತ್ವ ವಹಿಸಿದ್ದರು.

ಶಿಡ್ಲಘಟ್ಟ :

29-10-80ರಂದು ನಗರದಲ್ಲಿ ನೂರಾರು ರೈತರು ಪ್ರಲ್ಹೊಂಡ ಮೆರವಣಿಗೆ, ಬಹಿರಂಗ ಸಭೆ ನಡೆಯಿತು. ಪ್ರವಾಸಿ ಮಂದಿರದ ಬಳಿ ನಡೆದ ಸಭೆಯನ್ನುದ್ದೇಶಿಸಿ ಕಾಂ. ದೊರೆಸ್ವಾಮಿ, ಕಾಂ. ವೆಂಕಟೇಶ, ಕಾಂ. ಶ್ರೀರಾಮರೆಡ್ಡಿ, ರಾಮಣ್ಣ ಮುಂತಾದವರು ಮಾತನಾಡಿದರು. ನಂತರ ತಾಲ್ಲೂಕು ಕಛೇರಿಯಲ್ಲಿ ಪ್ರವೇಶಮಾಡಿ 121 ಜನರು ಬಂಧಿತರಾದರು. 30-10-80ರಂದು ಬಹಿರಂಗ ಸಭೆ ನಡೆದು 82 ಜನರು ಬಂಧಿತರಾದರು. ಕಾಂ. ಜಿ. ಪಾಪಣ್ಣ ಮತ್ತಿತರರು ನಾಯಕತ್ವ ವಹಿಸಿದ್ದರು. ಇದೇ ರೀತಿ 31-10-80 ರಂದು ಕೊತ್ತನೂರು, ಸೊಣ್ಣೇನಹಳ್ಳಿ ಮುಂತಾದ ಗ್ರಾಮಗಳ 101 ಜನರು ಮೆರವಣಿಗೆ ಸಭೆ ನಡೆಸಿದರು. ನಂತರ ತಾಲ್ಲೂಕು ಕಛೇರಿ ಎದುರು ನಡೆದ ಪಿಕೆಟಿಂಗ್‌ನಲ್ಲಿ 101 ಜನರು ಬಂಧಿತರಾದರು.

ಚಳುವಳಿಯ ದ್ವಿತೀಯ ಹಂತದಲ್ಲಿ ದಿನಾಂಕ 17-11-80ರಂದು ಕಾಂ. ದೊರೆಸ್ವಾಮಿ, ಕಾಂ. ಪಿ. ಎಸ್. ವಿ. ರೆಡ್ಡಿ, ಕಾಂ. ಮುನಿಸ್ವಾಮಿರೆಡ್ಡಿ ಮತ್ತಿತರರ ನಾಯಕತ್ವದಲ್ಲಿ ಪಿಕೆಟಿಂಗ್ ನಡೆಸಿ ಬಂಧಿತರಾದರು.

ಬಂಗಾರಪೇಟೆ :

ಮೊಟ್ಟಮೊದಲ ಬಾರಿಗೆ ತಾಲ್ಲೂಕಿನಲ್ಲಿ ಪ್ರಾರಂಭವಾದ ರೈತಚಳುವಳಿಯ ಅಂಗವಾಗಿ ನಡೆದ ಪಿಕೆಟಿಂಗ್ ಕಾರ್ಯಕ್ರಮದಲ್ಲಿ 212 ಜನರು ಬಂಧಿತರಾದರು. ಆರಂಭದಲ್ಲಿ ಬೃಹತ್ ಮೆರವಣಿಗೆ ನಡೆದು ನಂತರ ತಾಲ್ಲೂಕು ಕಛೇರಿ ಎದುರು ಪಿಕೆಟಿಂಗ್ ನಡೆಸಲಾಯಿತು. ವೆಂಕಟಕೃಷ್ಣರೆಡ್ಡಿ, ಸಂಪಂಗಿರೆಡ್ಡಿ, ಮುನಿವೆಂಕಟರೆಡ್ಡಿ ಇವರುಗಳು ಬಂಧಿತರಲ್ಲಿ ಪ್ರಮುಖರು. ಬಹಿರಂಗ ಸಭೆಯನ್ನು ಉದ್ದೇಶಿಸಿ ವೆಂಕಟಗಿರಿಯಪ್ಪ ಮಾತನಾಡಿದರು.

ಜಿಲ್ಲೆಯಾದ್ಯಂತ ವ್ಯಾಪಿಸಿರುವ ಚಳುವಳಿ ರೈತವರ್ಗದವರೇ ಅಲ್ಲದೇ ಇನ್ನಿತರ ಎಲ್ಲ ಪ್ರಜ್ಞಾವಂತ ಜನತೆಯ ಬೆಂಬಲವೂ ದೊರಕಿದೆ. ಸರಕಾರದ ನಿರ್ಲಕ್ಷ ನೀತಿಗೆ ಚಳುವಳಿಯೊಂದೇ ಸಮರ್ಪಕ ಉತ್ತರವಾಗಬಲ್ಲದು.

(ಈ ವರದಿ ಅಚ್ಚಾಗುತ್ತಿದ್ದಂತೆಯೇ ಚಿಂತಾಮಣಿ ಮತ್ತಿತರ ಕಡೆ ದಿನಾ ಪಿಕೆಟಿಂಗ್ ನಡೆಯುವ ಮತ್ತು ಬಂಧನವಾಗುತ್ತಿರುವ ಸುದ್ದಿ ಬಂದಿದೆ.)

●

ಐ. ಟಿ. ಸಿ. ಹೋರಾಟ

ಕಾಂ. ಸೂರ್ಯನಾರಾಯಣ ರಾವ್ ಬಂಧನ

ಕೆಲಸದಿಂದ ಅಮಾನತು ಮಾಡಿದ 125 ಮಂದಿ ಕಾರ್ಮಿಕರನ್ನು ಹಿಂತೆಗೆದುಕೊಳ್ಳಬೇಕು, ಜೇಮ್ಸ್ ಎಂಬ ಕಾರ್ಮಿಕನ ಮೇಲೆ ಹಲ್ಲೆ ಮಾಡಿದ ಗೂಂಡಾಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕು ಮತ್ತು ನಿಷ್ಪಕ್ಷಪಾತ ತನಿಖೆ ನಡೆಸಬೇಕೆಂದು ಒತ್ತಾಯಿಸಿ ಬೆಂಗಳೂರು ನಗರದ ಇಂಡಿಯನ್ ಟೊಬ್ಯಾಕೊ ಕಂಪೆನಿಯ ಕಾರ್ಮಿಕರು ಟೂಲ್ ಡೌನ್ ಮುಷ್ಕರವನ್ನು 26 ರಿಂದ ಪ್ರಾರಂಭಿಸಿದ್ದಾರೆ. ಮೇನೇಜುಮೆಂಟು ಮತ್ತು ಸರಕಾರ ಶಾಮೀಲಾಗಿ, ಸೆಕ್ಷನ್ 144 ಜಾರಿ ಮಾಡಿದ್ದರೂ ಶೇ. 100 ರಷ್ಟು ಮುಷ್ಕರ ಯಶಸ್ವಿಯಾಗಿದೆ. ಕಾರ್ಮಿಕರನ್ನು ಭೆಟ್ಟಿಮಾಡಲು ಹೋದ ಕಾಂ. ಸೂರ್ಯನಾರಾಯಣ ರಾವ್ ಮತ್ತು ಇತರ ಕೆಲವರನ್ನು ಪೋಲೀಸರು ಬಂಧಿಸಿದ್ದಾರೆ. ಕಾಂ. ಸೂರ್ಯನಾರಾಯಣ ರಾವ್ ಅವರನ್ನು ಬಂಧಿಸಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಸಾಮೂಹಿಕ ಸಂಘಟನೆಗಳು ಉಗ್ರವಾಗಿ ಖಂಡಿಸಿವೆ. 27 ರ ಸಂಜೆ ನಗರದ ಕಬ್ಬನ್ ಪಾರ್ಕಿನಲ್ಲಿ ಬಂಧನವನ್ನು ಪ್ರತಿಭಟಿಸಿ ಭಾರಿ ಬಹಿರಂಗ ಸಭೆ ನಡೆಯಿತು.

●

ಡಿಸೆಂಬರ್ 12ರಂದು ನಡೆಯಲಿರುವ ಬೃಹತ್ ರ್‍ಯಾಲಿ

(7ನೇ ಪುಟದಿಂದ)

ಟನೆ ಮತ್ತು ಬೇಡಿಕೆಗಳಿಗೆ ಕಾರ್ಮಿಕವರ್ಗ ಸಕ್ರಿಯ ಬೆಂಬಲವೀಯಬೇಕಾಗಿದೆ. ರೈತರ ನ್ಯಾಯವಾದ ಬೇಡಿಕೆಗಳಿಗೆ ಬೆಂಬಲವಿತ್ತು ತಾನು ರೈತ ವಿರೋಧಿಯಲ್ಲ ಎಂದು ಕಾರ್ಮಿಕ ವರ್ಗ ತೋರಿಸಿಕೊಡಬೇಕು. ಕಾರ್ಮಿಕರು ಮತ್ತು ಹಳ್ಳಿಯ ಬಡವರು ಒಂದಾಗಿ ಕಲೆತು ರೈತಚಳುವಳಿಗೆ ಬೆಂಬಲವೀಯುವುದರೊಂದಿಗೆ, ತಮ್ಮ ಸಂಕಷ್ಟಗಳ ಬಗ್ಗೆ ಜನತೆಗೂ ಸರಕಾರಕ್ಕೂ ತಿಳಿಸಬೇಕಾಗಿದೆ. ತಮ್ಮ ಸಮಸ್ಯೆಗಳ ಪರಿಹಾರಕ್ಕಾಗಿ ಮತ್ತು ನ್ಯಾಯಕ್ಕಾಗಿ ಹೋರಾಡಬೇಕಾಗಿದೆ, ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ನಡೆಯಲಿರುವ ರೈತ ಮತ್ತು ಕಾರ್ಮಿಕರ ಬೃಹತ್ ಪ್ರತಿಭಟನಾ ರ್‍ಯಾಲಿಯ ಉದ್ದೇಶವು ಇದೇ ಆಗಿದೆ.

ಕಾರ್ಮಿಕವರ್ಗವನ್ನು ದೊಡ್ಡರೀತಿಯಲ್ಲಿ ಭಾಗವಹಿಸುವಂತೆ ಮಾಡುವುದು, ರಾಜ್ಯದ ಬೇರೆಬೇರೆಡೆಗಳಿಂದ ಹಳ್ಳಿಯ ಬಡವರನ್ನು ದೊಡ್ಡ ಸಂಖ್ಯೆಯಲ್ಲಿ ಬರುವಂತೆ ಮಾಡುವುದು, ಪ್ರಚಾರದ ಮೂಲಕ ಜನತೆಗೆ ತಿಳುವಳಿಕೆ ನೀಡುವುದು, ವಿದ್ಯಾರ್ಥಿ-ಯುವಜನ ಮತ್ತು ಬುದ್ಧಿಜೀವಿಗಳು ಪಾಲ್ಗೊಳ್ಳುವಂತೆ ಮಾಡುವುದರ ಮೂಲಕ ಕರ್ನಾಟಕ ಪ್ರಾಂತ ರೈತ ಸಂಘವು ಕರೆಕೊಟ್ಟಿರುವ ಡಿಸೆಂಬರ್ 12ರ ರ್‍ಯಾಲಿಯನ್ನು ಯಶಸ್ವಿಗೊಳಿಸುವುದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತದರ ಸಾಮೂಹಿಕ ಸಂಘಟನೆಗಳ ಕರ್ತವ್ಯವಾಗಿದೆ. ರೈತ ಚಳುವಳಿಯನ್ನು ಬಲಪಡಿಸುವತ್ತ ಮತ್ತು ಹಳ್ಳಿಯ ಬಡವರ ಸಂಘಟನೆ ಬೆಳೆಸಿ ಹೋರಾಡುವತ್ತ ಡಿಸೆಂಬರ್ 12ರ ರ್‍ಯಾಲಿಯು ನವಚೈತನ್ಯ ನೀಡುವಂತಾಗಲಿ,

○

ಬೀದರ್ ಬಗ್ಗೆ ಗಮನ ಕೊಡಲು ಡಿ.ವೈ.ಓ

ಒತ್ತಾಯ

ಸಕ್ಕರೆ ಸೀಮೆಎಣ್ಣೆ ಮುಂತಾದ ಅಗತ್ಯವಸ್ತುಗಳ ಸರಬರಾಜು ಬೀದರ್ ಜಿಲ್ಲೆಯಲ್ಲಿ ಸಮರ್ಪಕವಾಗಿರುವಂತೆ ಮಾಡಬೇಕೆಂದು ಬೀದರ್ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ ಒತ್ತಾಯಿಸಿದೆ.

ಬೀದರ್‌ನಲ್ಲಿ ಕಾಳಸಂತೆಕೋರರು, ಲಾಭಕೋರರು ನ್ಯಾಯಬೆಲೆ ಅಂಗಡಿ ಮಾಲೀಕರು ಅಕ್ರಮ ವ್ಯವಹಾರಗಳನ್ನು ನಡೆಸುತ್ತಿದ್ದಾರೆ. ಪಡಿತರ ಚೀಟಿಗಳ ವ್ಯವಸ್ಥೆ ಸರಿಯಾಗಿಲ್ಲ ಹಳ್ಳಿಗಳಲ್ಲಂತೂ ಸೀಮೆ ಎಣ್ಣೆಯ ಗತಿ ಹೇಳತೀರದು. ಈ ಅವ್ಯವಸ್ಥೆಗಳನ್ನು ಸರಿಪಡಿಸದಿದ್ದರೆ ಯುವಜನ ಸಂಘಟನೆಯು ಮುಷ್ಕರ, ಘೇರಾವ್, ಪಿಕೆಟಿಂಗ್ ಮುಂತಾದುವನ್ನು ನಡೆಸುವುದಾಗಿ ನಿರ್ಧರಿಸಿದೆ.

○

ಡಿಸೆಂಬರ್ 12ರ ರ್‍ಯಾಲಿ

ಕರ್ನಾಟಕ ಪ್ರಾಂತ ರೈತಸಂಘವು ಕೊಟ್ಟ ಕರೆಯ ಮೇರೆಗೆ ಡಿಸೆಂಬರ್ 12(12-12-80)ರಂದು ಬೆಂಗಳೂರಿನಲ್ಲಿ ರೈತ-ಕಾರ್ಮಿಕರ ಬೃಹತ್ ಮತಪ್ರದರ್ಶನ ನಡೆಯಲಿದೆ. 12ರಂದು ಮಧ್ಯಾಹ್ನ ಒಂದು ಘಂಟೆಯ ಅಂದಾಜಿಗೆ ಬೆಂಗಳೂರು ನಗರದ ಸಿಲ್ವರ್ ಜ್ಯುಬಿಲಿ ಪಾರ್ಕಿನಿಂದ ಮೆರವಣಿಗೆ ಹೊರಡಲಿದೆ. ಬೇರೆಬೇರೆಡೆಯಿಂದ ಬರುವವರೆಲ್ಲರೂ ಮಧ್ಯಾಹ್ನ ಒಂದು ಘಂಟೆಗೆ ಮೊದಲೇ ಸಿಲ್ವರ್ ಜ್ಯುಬಿಲಿ ಪಾರ್ಕನ್ನು ಸೇರಬೇಕು ಹೊರಜಿಲ್ಲೆಗಳಿಂದ ಬಂದವರಿಗೆ ಉಳಕೊಳ್ಳಲು ಜಾಗದ ವ್ಯವಸ್ಥೆ ಮಾಡಲಾಗುವುದು. ಊಟ ಮತ್ತು ತಿಂಡಿಯ ವ್ಯವಸ್ಥೆಯನ್ನು ಅವರವರೇ ಮಾಡಿಕೊಳ್ಳಬೇಕು. ಬರುವಾಗ ಬೇರೆ ಬೇರೆ ಜಿಲ್ಲೆಯ ಹಾಗೂ ತಾಲ್ಲೂಕುಗಳ ಬ್ಯಾನರ್ಸ್ (ಪಕ್ಷದ್ದು, ರೈತಸಂಘದ್ದು, ಸಿ ಐ ಟಿ.ಯು ಮತ್ತಿತರ ಸಾಮೂಹಿಕ ಸಂಘಟನೆಗಳದ್ದು) ಗಳನ್ನು, ಬಾವುಟಗಳನ್ನು ತರಬೇಕು. ಡಿಸೆಂಬರ್ 12ರ ರ್‍ಯಾಲಿಯ ಬಗ್ಗೆ ಸ್ಥಳೀಯವಾಗಿ ಪ್ರಚಾರ ನಡೆಸಬೇಕು.

ಸ್ವಾಗತ ಸಮಿತಿ.

ಕೇಂದ್ರ ಸರಕಾರದ ಮಾಲಿಕತ್ವದ ಧೋರಣೆಯನ್ನು ಮತ್ತು ರಾಷ್ಟ್ರೀಯ ಭದ್ರತಾ ಸುಗ್ರೀವಾಜ್ಞೆಯನ್ನು ವಿರೋಧಿಸಿ ಪಶ್ಚಿಮ ಬಂಗಾಳದ ಮಾರಂಗವು ನವೆಂಬರ್ 27ರಂದು ಒಂದು ದಿನದ ಪಶ್ಚಿಮ ಬಂಗಾಳ ಬಂದ್ ಆಚರಿಸಲು ಕರೆ ಇತ್ತಿತ್ತು. ಸಿ ಪಿ ಐ ನವರೂ ಇದಕ್ಕೆ ಪೂರ್ಣ ಬೆಂಬಲವಿತ್ತು. ಬಂದ್ ಸಂಪೂರ್ಣ ಯಶಸ್ವಿಯಾದ ಸುದ್ದಿ ಬಂದಿದೆ. ಬಿಹಾರದಲ್ಲಿ ಆರು ಪಕ್ಷಗಳು ಕೊಟ್ಟ ಕರೆಯ ಮೇರೆಗೆ 27ರಂದು ಬಿಹಾರ್ ಬಂದ್ ಹೆಚ್ಚು ಕಡಿಮೆ ಯಶಸ್ವಿಯಾದ ಸುದ್ದಿ ಬಂದಿದೆ.

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT